# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:10-06-2026 ರಂದು ಬುಧವಾರ "ಶತಮಾನೋತ್ಸವ ಭವನದ ಹೊಸ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ 404ನೇ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಹೇಮಂತ್ ಎನ್. ಐ.ಎ.ಎಸ್. ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಕೇಶವ ಹೆಚ್. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಪ್ರೊ. ಚಂದ್ರಶೇಖರ್ ಎಸ್., ಡೀನರು, ಕಲಾ ನಿಕಾಯ | ಸದಸ್ಯರು |
| 6. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 7. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 8. | ಡಾ. ಚಿದಾನಂದ ಎನ್.ಕೆ. ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಎಂ. ವೆಂಕಟೇಶ್. ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಪ್ರಭಾಕರ್ ಎಸ್. ಮಂಟೂರೆ, ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಪ್ರತಿಭಾ ಕೆ.ಆರ್. ಪ್ರಾಂಶುಪಾಲರು | ಸದಸ್ಯರು |
| 12. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 13. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 14. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 15. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 16. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 17. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |
| 18. | ಶ್ರೀ ಶ್ರೀಕಾಂತ್ ಕೆ.ಎಸ್. | ವಿಶೇಷ ಆಹ್ವಾನಿತರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ 404ನೇ ಸಾಮಾನ್ಯ ಸಿಂಡಿಕೇಟ್ ಸಭೆಗೆ ಹಾಜರಾದ ಎಲ್ಲಾ ಸದಸ್ಯರನ್ನು ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಹಾಗೂ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಕುಲಪತಿಯವರನ್ನು ಕೋರಿದರು. ಮಾನ್ಯ ಕುಲಪತಿಗಳು ಮತ್ತೊಮ್ಮೆ ಸಭೆಗೆ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ ಕಾರ್ಯಸೂಚಿಯಂತೆ ಸಭೆಯನ್ನು ಪ್ರಾರಂಭಿಸಲು ಕೋರಿದರು.

ಸಭೆಯ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳುವ ಮುನ್ನ ಸದಸ್ಯರಾದ ಶ್ರೀ ಶ್ರೀಪಾಲ್ ರವರು ಮಾತನಾಡುತ್ತಾ ಹಿಂದಿನ ಕುಲಸಚಿವರು ಸಿಂಡಿಕೇಟ್ ಸದಸ್ಯರುಗಳಿಗೆ ನೀಡಬೇಕೆಂದು ಏಜೆನ್ಸಿಯವರಿಂದ ಹಣ ಪಡೆದಿದ್ದಾರೆಂದು ದೂರು ಬಂದಿದ್ದು, ಇದರ ಬಗ್ಗೆ ಕೂಲಂಕುಷವಾದ ತನಿಖೆ ನಡೆಸುವಂತೆ ಆಗ್ರಹಿಸಿದರು. ಕುಲಸಚಿವರು ಮಾತನಾಡುತ್ತಾ, ಈ ವಿಷಯವನ್ನು ನಿಗದಿತ ಕಾರ್ಯಸೂಚಿಯ ನಂತರ ಚರ್ಚಿಸೋಣವೆಂದರು ಹಾಗೂ ಇದರ ಬಗ್ಗೆ ಯಾವುದಾದರೂ ಲಿಖಿತ ದೂರುಗಳಿದ್ದಲ್ಲಿ ಪರಿಶೀಲಿಸಬಹುದೆಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಸದಸ್ಯರಾದ ಶ್ರೀ ಶಿವಕುಮಾರ್ ರವರು ಮಾತನಾಡುತ್ತಾ, ಸಭೆಯ ದಿನಾಂಕವನ್ನು ಪದೇ ಪದೇ ಬದಲಾವಣೆ ಮಾಡಿದಲ್ಲಿ ದಿನಾಂಕ ಹೊಂದಾಣಿಕೆ ಮಾಡಿಕೊಂಡು ಸಭೆಗೆ ಹಾಜರಾಗುವುದು ಕಷ್ಟವಾಗುತ್ತದೆ ಎಂದರು. ಮುಂದುವರೆದು ಸದಸ್ಯರು ಹಿಂದಿನ ಸಭೆಗಳಲ್ಲಿ ಆದ ನಿರ್ಣಯದ ಮೇಲೆ ಕೈಗೊಂಡ ಕ್ರಮದ ಅನುಪಾಲನಾ ವರದಿಯನ್ನು ಸಭೆಗೆ ಮಂಡಿಸದೇ ಇರುವುದನ್ನು ಪ್ರಸ್ತಾಪಿಸಿ, ಇದರಿಂದ ನಿರ್ಣಯದ ಮೇಲೆ ಆಡಳಿತಾಂಗದಿಂದ ಏನು ಕ್ರಮವಾಗಿದೆ ಎಂದು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲವೆಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಕೆಲವು ವಿಭಾಗದ ಅನುಪಾಲನಾ ವರದಿಯನ್ನು ನೀಡಲು ವಿಳಂಬವಾಗಿರುವುದರಿಂದ ಅದನ್ನು ಕ್ರೋಢೀಕರಿಸಿ ಸಭೆಗೆ ಮಂಡಿಸಲು ಸಾಧ್ಯವಾಗಿರುವುದಿಲ್ಲವೆಂದರು. ಹಾಗೂ ಮುಂದಿನ ಸಭೆಗೆ ಮಂಡಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಮುಸಾವೀರ್ ಬಾಷಾರವರು ಮಾತನಾಡುತ್ತಾ, ಸಭೆಯಲ್ಲಿ ಹೆಚ್ಚುವರಿ ಕಾರ್ಯಸೂಚಿಯ ವಿಷಯವು ಅಧಿಕವಾಗಿರುವುದನ್ನು ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಕೆಲವು ವಿಷಯಗಳು ಕಾರ್ಯಸೂಚಿಯು ರವಾನಿಸಿದ ನಂತರ ಸಭೆಗೆ ಮಂಡಿಸಲು ತೀರ್ಮಾನವಾಗುವುದರಿಂದ ಈ ರೀತಿ ಹೆಚ್ಚುವರಿ ಕಾರ್ಯಸೂಚಿ ಮಂಡಿಸಲಾಗಿದೆ. ಇನ್ನು ಮುಂದೆ ಹೆಚ್ಚುವರಿ ಕಾರ್ಯಸೂಚಿಯನ್ನು ಸಭೆಗೆ ಮಂಡಿಸುವುದನ್ನು ಆದಷ್ಟು ಕಡಿಮೆ ಮಾಡಲಾಗುವುದು ಎಂದರು.

ತದನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

## ಸಂಶೋಧನಾ ಮತ್ತು ಅಭಿವೃದ್ಧಿ ಘಟಕ

**2026–ಸಿಂ–4.01:** ಕುವೆಂಪು ವಿಶ್ವವಿದ್ಯಾಲಯವು ಸುಬ್ಬಯ್ಯ ಮೆಡಿಕಲ್ ಕಾಲೇಜ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಶಿವಮೊಗ್ಗ ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯವನ್ನು ಮಂಡಿಸಿ ಮಾತನಾಡುತ್ತಾ ಕುವೆಂಪು ವಿಶ್ವವಿದ್ಯಾಲಯವು ಸುಬ್ಬಯ್ಯ ಮೆಡಿಕಲ್ ಕಾಲೇಜ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಶಿವಮೊಗ್ಗ ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳುವ ಸಂಬಂಧ ಸದರಿ MOU ನಲ್ಲಿ ಇರುವ ಷರತ್ತುಗಳನ್ನು ಸಭೆಯ ಗಮನಕ್ಕೆ ತಂದರು. ಇದರ ಬಗ್ಗೆ ಡಾ. ನಾಗರಾಜ್, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಪ್ರಾಣಿಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಇವರನ್ನು ಸಭೆಗೆ ಆಹ್ವಾನಿಸಿ ವಿವರಣೆ ಒದಗಿಸುವಂತೆ ಕೋರಲಾಯಿತು. ಕುಲಪತಿಗಳು ಮಾತನಾಡುತ್ತಾ ಈ ಒಡಂಬಡಿಕೆಯಿಂದ ವಿಶ್ವವಿದ್ಯಾಲಯಕ್ಕೆ ಆಗುವ ಉಪಯೋಗದ ಬಗ್ಗೆ ವಿವರಿಸುವಂತೆ ತಿಳಿಸಿದರು. ಅದಕ್ಕೆ ಪ್ರೊ.ನಾಗರಾಜ್‌ರವರು MoU ಕುರಿತು ವಿವರಿಸುತ್ತಾ, ಆ ಸಂಸ್ಥೆಯಲ್ಲಿರುವ ಪರಿಣಿತರನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ನಮ್ಮ ವಿಧ್ಯಾರ್ಥಿಗಳಿಗೆ ಸಂಶೋಧನೆಗೆ ಸಂಬಂಧಿಸಿದ ವಿಷಯಗಳ ವಿನಿಮಯಕ್ಕೆ ಹೆಚ್ಚು ಅನುಕೂಲವಾಗುವುದು ಎಂದರು. ಹಾಗೂ ಅಂತರ್‌ಶಿಸ್ತೀಯ ಉದ್ದೇಶದಿಂದಲೂ ಈ ಒಡಂಬಡಿಕೆ ಅನುಕೂಲವಾಗುವುದು ಎಂದರು. ಸದಸ್ಯರಾದ ಶ್ರೀ. ಶ್ರೀಪಾಲ್‌ರವರು ಮತ್ತು ಶ್ರೀ ಶಶಿಧರ್ ಮಾತನಾಡುತ್ತಾ ಈ ಒಡಂಬಡಿಕೆಯಲ್ಲಿ ಹಣಕಾಸಿನ ಬಗ್ಗೆ ಇರುವ ಷರತ್ತುಗಳೇನಾದರೂ ಇದೆಯೇ ಎಂದರು. ಇದಕ್ಕೆ ಉತ್ತರಿಸಿದ ಪ್ರೊ.ನಾಗರಾಜ್‌ರವರು ಈ ಒಡಂಬಡಿಕೆಯಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲವೆಂದರು. ಕುಲಪತಿಗಳು ಮಾತನಾಡುತ್ತಾ ನ್ಯಾಕ್ ಮಾನ್ಯತೆ ದೃಷ್ಟಿಯಿಂದಲೂ ಒಡಂಬಡಿಕೆಯು ಅವಶ್ಯವೆಂದರು. ಸದಸ್ಯರಾದ ಪ್ರೊ. ಚಂದ್ರಶೇಖರ್ ಇವರು ಮಾತನಾಡಿ, ಒಡಂಬಡಿಕೆಯಿಂದ ನಮ್ಮ ವಿಧ್ಯಾರ್ಥಿಗಳ ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚು ಅನುಕೂಲವಾಗುವುದೆಂದರು. ಎರಡೂ ಸಂಸ್ಥೆಗಳ ನಡುವೆ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ. ಮಾನ್ಯ ಕುಲಪತಿಗಳು ಮಾತನಾಡಿ ನಮ್ಮ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ವಿಭಾಗ, ಸ್ನಾತಕೋತ್ತರ ಸೂಕ್ಷ್ಮಾಣು ಜೀವಶಾಸ್ತ್ರ (ಮೈಕ್ರೋಬಯಾಲಜಿ) ಮುಂತಾದ ಜೀವ ವಿಜ್ಞಾನ ವಿಷಯಗಳು ಇರುವುದರಿಂದ ಸುಸಜ್ಜಿತ ಆಸ್ಪತ್ರೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದರಿಂದ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಕೈಗೊಳ್ಳುವ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ವಿಶ್ವವಿದ್ಯಾಲಯಕ್ಕೆ ನ್ಯಾಕ್ ಟೀಮ್ ಭೇಟಿ ನೀಡಿದಾಗ ಒಳ್ಳೆಯ ಪಾಯಿಂಟ್ಸ್ ಕೂಡ ಸಿಗುತ್ತದೆ ಎಂದರು. ಸದಸ್ಯರಾದ ಶ್ರೀಪಾಲ್ ರವರು ಮಾತನಾಡಿ ವಿಶ್ವವಿದ್ಯಾಲಯದ ಹೆಸರು ಬಳಕೆ ಮಾಡಿಕೊಂಡು ಸುಬ್ಬಯ್ಯ ಮೆಡಿಕಲ್ ಕಾಲೇಜ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದವರು ಅನುಕೂಲ ಪಡೆದುಕೊಳ್ಳುವಂತಾಗಬಾರದು ಎಂದರು. ಇದಕ್ಕೆ ಎಲ್ಲಾ ಸದಸ್ಯರೂ ಧ್ವನಿಗೂಡಿಸಿದರು.

ಕುಲಸಚಿವರು ಸದ್ಯಕ್ಕೆ ಎಂ.ಓ.ಯು. ಮಾಡಿಕೊಳ್ಳಲು ಅನುಮತಿಸಿ ನಂತರ ಪ್ರಾಜೆಕ್ಟ್ ಸ್ಪೆಸಿಫಿಕೇಷನ್ ಬಂದಾಗ ಅದನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗುವುದು. ಸದರಿ ಸಭೆಯಲ್ಲಿ ವಿಶ್ವವಿದ್ಯಾಲಯಕ್ಕೆ ಸದರಿ ಪ್ರಾಜೆಕ್ಟ್ ನಿಂದ ಆಗುವ ಅನುಕೂಲ ಹಾಗೂ ಅನಾನುಕೂಲಗಳ ಬಗೆಗೆ ಪರಿಶೀಲಿಸಿ ನಿರ್ಣಯ ಕೈಗೊಳ್ಳಬಹುದು ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಸದ್ಯಕ್ಕೆ ಒಡಂಬಡಿಕೆ (MoU) ಮಾಡಿಕೊಳ್ಳಲು ಅನುಮತಿಸಿ ನಂತರ ಪ್ರಾಜೆಕ್ಟ್ ಸ್ಪೆಸಿಫಿಕೇಷನ್ ಬಂದಾಗ ಸಿಂಡಿಕೇಟ್ ಸಭೆಗೆ ಮಂಡಿಸಿ ಪರಿಶೀಲಿಸಿ ವಿಶ್ವವಿದ್ಯಾಲಯದ ಸಹಯೋಗ ಇದ್ದಲ್ಲಿ ಮಾತ್ರ ವಿಶ್ವವಿದ್ಯಾಲಯದ ಹೆಸರು, ಲೋಗೋ ಮತ್ತು ವಿಶ್ವವಿದ್ಯಾಲಯದ ವಿವರಗಳನ್ನು ಬಳಸಿಕೊಳ್ಳಲು ಅನುಮತಿ ನೀಡಬಹುದು ಎಂದು ತೀರ್ಮಾನಿಸಲಾಯಿತು.

**2026–ಸಿಂ–4.01(ಎ):** M/s Next Gen Learning Academy LLP Bangalore ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳುವ ಕುರಿತು ಹಾಗೂ ಡಾ.ಕೆ.ಆರ್. ಮಂಜುನಾಥ್, ಪ್ರಾಧ್ಯಾಪಕರು, ಎಂ.ಬಿ.ಎ. ಇವರು Consultant ಆಗಿ ಕಾರ್ಯನಿರ್ವಹಿಸಲು ಅನುಮತಿಸುವ ಕುರಿತು.

**ಚರ್ಚೆ:** ಮಾನ್ಯ ಕುಲಪತಿಗಳು ಮಾತನಾಡಿ ಡಾ. ಕೆ.ಆರ್. ಮಂಜುನಾಥ್, ಪ್ರಾಧ್ಯಾಪಕರು, ಎಂ.ಬಿ.ಎ. ವಿಭಾಗ ಇವರನ್ನು ಸಭೆಗೆ ಆಹ್ವಾನಿಸಿ M/s Next Gen Learning Academy LLP Bangalore ಈ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸುವಂತೆ ತಿಳಿಸಿದರು. ಡಾ. ಕೆ.ಆರ್. ಮಂಜುನಾಥ್ ರವರು ಮಾತನಾಡಿ ಬಜಾಜ್ ಫೈನಾನ್ಸ್ ಸಂಸ್ಥೆಯವರು ಭಾರತ ಸರ್ಕಾರದ ಸಿ.ಎಸ್.ಆರ್ ಸಂಸ್ಥೆಯಿಂದ ಹಣಕಾಸಿನ ನೆರವನ್ನು ಪಡೆದು M/s Next Gen Learning Academy LLP Bangalore – ಇವರ ಮೂಲಕ ವಿದ್ಯಾರ್ಥಿಗಳಿಗೆ ಸ್ಕಿಲ್ ಆಧಾರಿತ ಕೌಶಲ್ಯಗಳ ತರಬೇತಿ ನೀಡಲಾಗುತ್ತದೆ. ಬಜಾಜ್ ಫೈನಾನ್ಸ್ ಸಂಸ್ಥೆಯವರು ಸಮಾಜ ಸೇವೆಯ ಭಾಗವಾಗಿ ಈ ತರಬೇತಿ ಹಮ್ಮಿಕೊಂಡಿರುತ್ತಾರೆ. ಆದ್ದರಿಂದ ಈ ಬಗ್ಗೆ M/s Next Gen Learning Academy LLP Bangalore ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳಬೇಕಾಗಿರುತ್ತದೆ ಎಂದರು. ಒಡಂಬಡಿಕೆ ಮಾಡಿಕೊಂಡ ನಂತರ ವಿದ್ಯಾರ್ಥಿಗಳಿಗೆ ಕೌಶಲ್ಯಗಳ ತರಬೇತಿ ನೀಡುತ್ತಾರೆ. ತರಬೇತಿ ನಂತರ ಅದಕ್ಕೆ ಸಂಬಂಧಿಸಿದಂತೆ ಪರೀಕ್ಷೆ ನಡೆಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಸಂದರ್ಶನ ನಡೆಸಿ ಉದ್ಯೋಗ ನೀಡಲಾಗುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು.

ಕುಲಸಚಿವರು ಮಾತನಾಡಿ ಒಡಂಬಡಿಕೆಯಲ್ಲಿ Academic Support ಎಂದು ನಮೂದಿಸಲಾಗಿದೆ. ಅದರ ಬದಲು ಯಾವ ಯಾವ ಹೆಚ್ಚುವರಿ ಕೌಶಲ್ಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸಿಕೊಡಲಾಗುತ್ತದೆ. ಯಾವ ಪ್ರಾಜೆಕ್ಟ್ ಹೇಳಿಕೊಡಲಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

ನಮೂದಿಸಬೇಕು. Short Term Course ಮಾಡಿ ಸರ್ಟಿಫಿಕೇಟ್ ನೀಡಿದರೆ ವಿದ್ಯಾರ್ಥಿಗಳೇ ಅದರ ಮುಖಾಂತರ ಕೆಲಸಕ್ಕೆ ಪ್ರಯತ್ನಿಸಬಹುದು ಎಂದರು. ಆದ್ದರಿಂದ ಕರಡು ಒಡಂಬಡಿಕೆಯಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗ ಪಡೆಯಲು ಅಗತ್ಯವಾಗಿರುವ ಕೌಶಲ್ಯಗಳನ್ನು ಸೇರ್ಪಡಿಸಬೇಕು. ಹಾಗೂ ಒಟ್ಟು ಎಷ್ಟು ಅವಧಿಯ ತರಬೇತಿ ನೀಡುತ್ತಾರೆ ಎಂಬುದನ್ನು ನಮೂದಿಸಬೇಕು ಎಂದು ಹೇಳಿದರು, ಎಲ್ಲಾ ಸದಸ್ಯರುಗಳು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ M/s Next Gen Learning Academy LLP Bangalore ಈ ಸಂಸ್ಥೆಯವರು ಒಡಂಬಡಿಕೆ (MoU) ಯಲ್ಲಿ Academic support ಎನ್ನುವ ಬದಲು ವಿದ್ಯಾರ್ಥಿಗಳಿಗೆ ಯಾವ ಯಾವ ಹೆಚ್ಚುವರಿ ಕೌಶಲ್ಯಗಳನ್ನು ಕಲಿಸಿಕೊಡಲಾಗುತ್ತದೆ. ಒಟ್ಟು ಎಷ್ಟು ಅವಧಿಯ ತರಬೇತಿ ನೀಡುತ್ತಾರೆ ಎಂಬುದನ್ನು ನಮೂದಿಸಬೇಕು ಹಾಗೂ ಇನ್ನಿತರೆ ಸೂಕ್ತ ಮಾರ್ಪಾಡುಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲು ನಿರ್ಣಯಿಸಲಾಯಿತು.

**2026–ಸಿಂ–4.01(ಬಿ):** ವಿಶ್ವವಿದ್ಯಾಲಯದ ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ ಪ್ರಾಚ್ಯವಸ್ತುಗಳ ಸಂರಕ್ಷಣೆ ಹಾಗೂ ಡಿಜಿಟಲೀಕರಣ ಮಾಡಿಕೊಳ್ಳಲು ಒಡಂಬಡಿಕೆ ಮಾಡಿಕೊಳ್ಳುವ ಕುರಿತು.

**ಚರ್ಚೆ:** ಕುಲಪತಿಗಳು ಮಾತನಾಡುತ್ತಾ ಕೆಳದಿ ವಸ್ತು ಸಂಗ್ರಹಾಲಯದಲ್ಲಿ ತಾಳೆಗರಿಗಳು ತುಂಬಾ ಇದೆ. ತಾಳೆಗರಿಗಳು ಹಾಳಾಗುತ್ತಾ ಇದೆ. ಭಾರತ ಸರ್ಕಾರದ ಸಹ ಸಂಸ್ಥೆಯಾದ ಗ್ಯಾನ್ ಭಾರತ್ ಸಂಸ್ಥೆಯು ತಾಳೆಗರಿಗಳನ್ನು ಡಿಜಿಟಲೈಜ್ ಮಾಡಿಕೊಡುವುದಾಗಿ ಹೇಳಿದ್ದರು. ನಂತರ ಮಿಥಿಕ್ ಸೊಸೈಟಿ, ಮೈಸೂರು ಈ ಸಂಸ್ಥೆಯವರು ತಾವು ಕೆಳದಿ ಮ್ಯೂಸಿಯಂನಲ್ಲಿರುವ ತಾಳೆಗರಿಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೈಜ್ ಮಾಡಿಕೊಡುವುದಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಸಂಸ್ಥೆಯವರು ಕರ್ನಾಟಕದ ಬೇರೆ ಬೇರೆ ಇಲಾಖೆಗಳ ಹಳೆಯ ದಾಖಲೆಗಳನ್ನು ಡಿಜಿಟಲೈಜ್ ಮಾಡಿ ಇಂಡಿಯನ್ ನಾಲೆಡ್ಜ್ ಸಿಸ್ಟಮ್ ಅನ್ವಯ ಒಂದು ಕಡೆ ಸ್ಟೋರ್ ಮಾಡಲಾಗುವುದು ಎಂದು ತಿಳಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡುತ್ತಾ ಮಿಥಿಕ್ ಸೊಸೈಟಿಯವರು ಕೆಳದಿಗೆ ಬಂದು ತಾಳೆಗರಿಗಳನ್ನು ಸ್ಕ್ಯಾನ್ ಮಾಡುತ್ತಾರೆಯೇ ಎಂದು ಕೇಳಿದರು. ಅದಕ್ಕೆ ಉತ್ತರಿಸಿದ ಮಾನ್ಯ ಕುಲಪತಿಗಳು ತಾಳೆಗರಿಗಳನ್ನು ಸ್ಕ್ಯಾನ್ ಮಾಡಲು ಅದಕ್ಕೆ ಅನುವಾಗುವಂತೆ ಲ್ಯಾಬ್ ವ್ಯವಸ್ಥೆ ಮಾಡಿಕೊಳ್ಳಬೇಕು, ಮೈಸೂರಿನಲ್ಲಿ ಸದರಿ ಲ್ಯಾಬ್ ವ್ಯವಸ್ಥೆ ಈಗಾಗಲೇ ಇರುವುದರಿಂದ ಅಲ್ಲಿಗೇ ತಾಳೆಗರಿಗಳನ್ನು ಸಾಗಿಸಿದರೆ ಅಲ್ಲೇ ಸ್ಕ್ಯಾನ್ ಮಾಡುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ ಕೆಳದಿಗೆ ಸದರಿ ಸಂಸ್ಥೆಯವರನ್ನು ಆಹ್ವಾನಿಸಿ ಸ್ಕ್ಯಾನ್ ಮಾಡಿಸುವುದೋ ಅಥವಾ ಮೈಸೂರಿಗೆ ತಾಳೆಗರಿಗಳನ್ನು ಸಾಗಿಸಿ ಸ್ಕ್ಯಾನ್ ಮಾಡಿಸುವುದೋ ಎಂಬ ಬಗ್ಗೆ ಹಾಗೂ ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ ಎಂದರು.

ಸದಸ್ಯರಾದ ಶ್ರೀಪಾಲ್‌ರವರು ಮಾತನಾಡಿ ಮಿಥಿಕ್ ಸೊಸೈಟಿ ಬಹಳ ಹಳೆಯ ಸಂಸ್ಥೆ ಬೇರೆ ಬೇರೆ ಇಲಾಖೆಗಳ ದಾಖಲೆಗಳನ್ನು ಈ ಸಂಸ್ಥೆ ಡಿಜಿಟಲೈಜ್ ಮಾಡಿದೆ ಎಂದರು. ಕುಲಸಚಿವ(ಮೌಲ್ಯಮಾಪನ)ರವರು ಕೂಡ ಇದು ಸರ್ಕಾರದ ಅಧಿಕೃತ ಎನ್.ಜಿ.ಓ. ಆಗಿದ್ದು, ಬಹಳ ಹಳೆಯ ಸಂಸ್ಥೆಯಾಗಿದೆ ಎಂದರು.

ಕುಲಸಚಿವರು ಮಾತನಾಡಿ ಮಿಥಿಕ್ ಸೊಸೈಟಿಯವರು ಯಾವುದೇ ಹಣಕಾಸಿನ ಅಪೇಕ್ಷೆಯಿಲ್ಲದೇ ಸ್ಕ್ಯಾನ್ ಮಾಡಿ ಡಿಜಿಟಲೈಜ್ ಮಾಡುತ್ತಾರೆ ಎಂದರೆ ಅವರಿಗೆ ಯಾರು ಹಣಕಾಸಿನ ನೆರವು ನೀಡುತ್ತಾರೆ. ಹಾಗೂ ಅವರು ಮೈಸೂರು ವಿಶ್ವವಿದ್ಯಾಲಯ ಹಾಗೂ ಬೇರೆ ಬೇರೆ ಕಡೆ ಮಾಡಿರುವ ಕೆಲಸಗಳ ಬಗ್ಗೆ ಇಂಟೆಂಟ್ ಗಳೊಂದಿಗೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಬಹುದು ಎಂದು ಹೇಳಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಕೆಳದಿ ವಸ್ತು ಸಂಗ್ರಹಾಲಯದ ಕ್ಯುರೇಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಶ್ರುತೇಶ್ ಆಚಾರ್ಯರವರನ್ನು ಸಭೆಗೆ ಆಹ್ವಾನಿಸಿ ಕೆಳದಿ ವಸ್ತು ಸಂಗ್ರಹಾಲಯದಲ್ಲಿ ಇರುವ ತಾಳೆಗರಿಗಳ ಕುರಿತು ಮಾಹಿತಿ ಪಡೆಯಲಾಯಿತು. ಕುಲಸಚಿವರು ಕೆಳದಿ ವಸ್ತು ಸಂಗ್ರಹಾಲಯಕ್ಕೆ ಒಮ್ಮೆ ಭೇಟಿ ಕೊಡೋಣ ಎಂದು ಹೇಳಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಮಿಥಿಕ್ ಸೊಸೈಟಿ, ಮೈಸೂರು ಈ ಸಂಸ್ಥೆಯವರು ಈವರೆಗೆ ನಿರ್ವಹಿಸಿರುವ ಕೆಲಸಗಳ ಇಂಟೆಂಟ್‌ಗಳನ್ನೊಳಗೊಂಡಂತೆ ತಾಳೆಗರಿಗಳನ್ನು ಸ್ಕ್ಯಾನ್ ಮಾಡಲು ತಗಲುವ ಖರ್ಚು-ವೆಚ್ಚಗಳಿಗೆ ಸಂಬಂಧಿಸಿದಂತೆ ವಿವರವಾದ (DPR) ಪ್ರಸ್ತಾವನೆಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವಂತೆ ತದನಂತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

## ಶೈಕ್ಷಣಿಕ ವಿಭಾಗ

**2026-ಸಿಂ-4.02:** ಪಿಹೆಚ್.ಡಿ. ಪರಿಷ್ಕೃತ ವಿನಿಯಮ-2024ರ ಬಗ್ಗೆ.

ಚರ್ಚೆ: ಕುಲಸಚಿವ(ಮೌಲ್ಯಮಾಪನ)ರವರು ಪಿಹೆಚ್.ಡಿ. ಪರಿಷ್ಕೃತ ವಿನಿಯಮ-2024ರ ಬಗ್ಗೆ ಸಭೆಗೆ ವಿವರಣೆ ನೀಡಿದರು. ಸದರಿ ವಿನಿಯಮದ ಪ್ರಕಾರ ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ. ಪ್ರವೇಶಕ್ಕೆ ಪ್ರವೇಶ ಪರೀಕ್ಷೆ ಇರುವುದಿಲ್ಲ. ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಾದ NET/SRF/JRF ಮತ್ತು ರಾಜ್ಯ ಮಟ್ಟದ ಪರೀಕ್ಷೆಯಾದ K-SET ಪರೀಕ್ಷೆಯಲ್ಲಿ ಅರ್ಹತೆ ಹೊಂದಿದ ವಿದ್ಯಾರ್ಥಿಗಳಿಗೆ ಮಾತ್ರ ಪಿಹೆಚ್.ಡಿ. ಪದವಿಗೆ ಪ್ರವೇಶ ನೀಡಬಹುದು ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಯು.ಜಿ.ಸಿ. ಅಧಿಸೂಚನೆ ದಿನಾಂಕ:07-11-2022 ರಂದು ಪ್ರಕಟಿಸಿರುವ (Minimum Standrards and Procedure for Award of Ph.D., Degree) Regulation-2022 ಹಾಗೂ Public Notice No.F.4-1(UGC-NET Review Committee)/2024(NET)/140648 Dated March 27, 2024/7 / 1946 ರನ್ನು ಯಥಾವತ್ತಾಗಿ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಲು ನಿರ್ಣಯಿಸಲಾಯಿತು. ಹಾಗೂ ಸದರಿ ವಿನಿಯಮದಲ್ಲಿ ಮಾನದಂಡಗಳಾಗಿ ಪರಿಗಣಿಸಿರುವ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಾದ NET/SRF/JRF ಜೊತೆಗೆ ರಾಜ್ಯ ಮಟ್ಟದ K-SET ಪರೀಕ್ಷೆಯನ್ನೂ ಸೇರ್ಪಡೆಗೊಳಿಸಲು ತೀರ್ಮಾನಿಸಲಾಯಿತು. ಕರ್ನಾಟಕ ರಾಜ್ಯ ಸರ್ಕಾರದ ಮೀಸಲಾತಿ ನಿಯಮಗಳಂತೆ ಪಿಹೆಚ್.ಡಿ ಪ್ರವೇಶಾತಿಗೆ ಹಂಚಿಕೆ ಮಾಡಲು ನಿರ್ಣಯಿಸಲಾಯಿತು.

**2026-ಸಿಂ-4.03:** ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ಕಾಲೇಜು ಆಗಿರುವ ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ ಯು.ಯು.ಸಿ.ಎಂ.ಎಸ್.ನ ಪೋರ್ಟಲ್‌ನಲ್ಲಿ 02 ಐಚ್ಛಿಕ ವಿಷಯ ಗುಚ್ಛಗಳನ್ನು ಸೇರ್ಪಡೆಗೊಳಿಸುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟ ಕಾಲೇಜು ಆಗಿರುವ ವಿಶ್ವವಿದ್ಯಾಲಯ ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ (ಯು.ಎಸ್.ಎಂ.ಆರ್.)ಕಾಲೇಜಿನಲ್ಲಿ 2026-27ನೇ ಶೈಕ್ಷಣಿಕ ಸಾಲಿನಿಂದ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ ಯು.ಯು.ಸಿ.ಎಂ.ಎಸ್.ನ ಪೋರ್ಟಲ್‌ನಲ್ಲಿ ಈ ಕೆಳಕಂಡ 02 ಐಚ್ಛಿಕ ವಿಷಯ ಗುಚ್ಛಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಸೇರ್ಪಡೆಗೊಳಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕೈಗೊಂಡ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

| SL. No | Subject | Intake |
|---|---|---|
| 01 | History-Kannada(Opt)- -Sociology (ಹೊಸ ವಿಷಯ ಸಮೂಹ) | 60 |
| 02 | Bachelor of Computer Application (B.C.A) | 140 |

**2026–ಸಿಂ–4.04:** ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿರುವ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ ಯು.ಯು.ಸಿ.ಎಂ.ಎಸ್.ನ ಪೋರ್ಟಲ್‌ನಲ್ಲಿ 05 ಐಚ್ಛಿಕ ವಿಷಯ ಗುಚ್ಛಗಳನ್ನು ಸೇರ್ಪಡೆಗೊಳಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿರುವ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ ಯು.ಯು.ಸಿ.ಎಂ.ಎಸ್.ನ ಪೋರ್ಟಲ್‌ನಲ್ಲಿ ಈ ಕೆಳಕಂಡ 05 ಐಚ್ಛಿಕ ವಿಷಯ ಗುಚ್ಛಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಸೇರ್ಪಡೆಗೊಳಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕೈಗೊಂಡ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

| SL. No | Subject | Intake |
|---|---|---|
| 01 | Journalism- English (Opt)-Psychology (Existing combination) | 20 |
| 02 | History-Kannada(Opt)- Political Science (Existing combination) | 20 |
| 03 | Journalism-Economics- Political Science(New combination) | 20 |
| 04 | History- Political Science-Education (New combination) | 20 |
| 05 | History- Political Science-English(Opt) (New combination) | 20 |

**2026–ಸಿಂ–4.05:** "ಸೋಮಶೇಖರ ಪಿ.ಸಿ. ಬಿನ್ ಪರಶುರಾಮಪ್ಪ ಬಿ.ಹೆಚ್., ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ ಶಂಕರಘಟ್ಟ" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ದತ್ತಿನಿಧಿ ಸ್ವರ್ಣಪದಕ ದಾನಿಗಳಾದ ಶ್ರೀ ಸೋಮಶೇಖರ ಪಿ.ಸಿ., ನಿವೃತ್ತ ಹಿರಿಯ ಸಹಾಯಕರು, ಕುವೆಂಪು ವಿಶ್ವವಿದ್ಯಾಲಯ, ಕೇರ್ ಆಫ್ ಶ್ರೀ ವೆಂಕಟೇಶ್ವರ ನಿಲಯ, ತರೀಕೆರೆ ಮುಖ್ಯ ರಸ್ತೆ, ಶಂಕರಘಟ್ಟ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ – ಇವರು **"ಸೋಮಶೇಖರ. ಪಿ.ಸಿ. ಬಿನ್ ಪರಶುರಾಮಪ್ಪ, ಬಿ.ಹೆಚ್, ನಿವೃತ್ತ ಹಿರಿಯ ಸಹಾಯಕ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ"** ಹೆಸರಿನಲ್ಲಿ 2025–26ನೇ (35ನೇ ಘಟಿಕೋತ್ಸವ) ಶೈಕ್ಷಣಿಕ ಸಾಲಿನಿಂದ **ಕುವೆಂಪು ವಿಶ್ವವಿದ್ಯಾಲಯದ ಶಿಕ್ಷಣ ನಿಕಾಯದ ಸ್ನಾತಕೋತ್ತರ ದೈಹಿಕ ಶಿಕ್ಷಣ ಅಧ್ಯಯನ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ** ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದತ್ತಿನಿಧಿ ಸ್ವರ್ಣಪದಕವನ್ನು ನೀಡುವ ಸಂಬಂಧ, ಸದರಿ ದತ್ತಿನಿಧಿ ಸ್ವರ್ಣಪದಕವನ್ನು 2025–26ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ 35ನೇ ಘಟಿಕೋತ್ಸವದಲ್ಲಿ ಈಗಾಗಲೇ ದತ್ತಿನಿಧಿ ಸ್ವರ್ಣಪದಕವನ್ನು ಪ್ರದಾನ ಮಾಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಲಾಯಿತು ಹಾಗೂ ಪದಕ ಸ್ಥಾಪಿಸಿದ ದಾನಿಗಳನ್ನು ಅಭಿನಂದಿಸಿತು.

**2026–ಸಿಂ–4.06:** "Smt Mythradevi B.S. Yadiyurappa Memorial Young Researcher Award" Gold Medal" ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ



Scanned with OKEN Scanner

**ನಿರ್ಣಯ:** ದತ್ತಿನಿಧಿ ಸ್ವರ್ಣಪದಕ ದಾನಿಗಳಾದ Sri. B Y Raghavendra, Member of Parliment , Maithri Nilaya, 7th Cross 3rd Phase, 2nd Block Vinobanagara, Shivamogga-577201 ಇವರು "Smt. Mythradevi B S Yadiyurappa Memorial Young Researcher Award Gold Medal" ಹೆಸರಿನಲ್ಲಿ ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ಎಂ.ಎಸ್ಸಿ. ಪರಿಸರ ವಿಜ್ಞಾನ ವಿಷಯದಲ್ಲಿ Research Project ನಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ನಿಗೆ ದತ್ತಿನಿಧಿ ಸ್ವರ್ಣಪದಕವನ್ನು ನೀಡುವ ಸಂಬಂಧ, ಸದರಿ ದತ್ತಿನಿಧಿ ಸ್ವರ್ಣಪದಕವನ್ನು 2025-26ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ 35ನೇ ಘಟಿಕೋತ್ಸವದಲ್ಲಿ ಈಗಾಗಲೇ ದತ್ತಿನಿಧಿ ಸ್ವರ್ಣಪದಕವನ್ನು ಪ್ರದಾನ ಮಾಡಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಲಾಯಿತು ಹಾಗೂ ಪದಕ ಸ್ಥಾಪಿಸಿದ ದಾನಿಗಳನ್ನು ಅಭಿನಂದಿಸಿತು.

**2026-ಸಿಂ-4.06(ಎ):** 2024-25ನೇ ಸಾಲಿನಲ್ಲಿ MBA/ MCA ವಿಭಾಗಕ್ಕೆ ಪ್ರವೇಶಾತಿ ಪಡೆದ ಎಸ್.ಸಿ./ ಎಸ್.ಟಿ. ವಿದ್ಯಾರ್ಥಿಗಳು ಪ್ರವೇಶಾತಿ ಶುಲ್ಕ ಪಾವತಿಸದೇ ಇರುವ ಕುರಿತು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಪ್ರವೇಶಾತಿ ಶುಲ್ಕ ಪಾವತಿಸದೇ ಇರುವ MBA/ MCA ವಿಭಾಗಕ್ಕೆ ಪ್ರವೇಶಾತಿ ಪಡೆದ ಎಸ್.ಸಿ./ ಎಸ್.ಟಿ. ವಿದ್ಯಾರ್ಥಿಗಳು ಈಗಾಗಲೇ ಅಂತಿಮ ಸೆಮಿಸ್ಟರ್ ಪರೀಕ್ಷೆ ಮುಗಿಸಿರುವವರಿಗೆ ನೋಟೀಸ್ ಕೊಡಬೇಕು ಹಾಗೂ ಈಗ ವ್ಯಾಸಂಗ ಮಾಡುತ್ತಿದ್ದರೆ ಅವರ ಫಲಿತಾಂಶ/ಅಂಕಪಟ್ಟಿಯನ್ನು ತಡೆಹಿಡಿಯಲು ಹಾಗೂ ಪ್ರವೇಶಾತಿ ಸಮಯದಲ್ಲಿ ಸಂಬಂಧಿಸಿದ ವಿಭಾಗಕ್ಕೆ ನೀಡಿರುವ ಅವರುಗಳ ಮೂಲ ಅಂಕಪಟ್ಟಿ ಇತರೇ ದಾಖಲಾತಿಗಳನ್ನು ಬಾಕಿಶುಲ್ಕ ಪಾವತಿಸಿದ ರಶೀದಿಯನ್ನು ವಿಭಾಗಕ್ಕೆ ಸಲ್ಲಿಸಿದ ನಂತರ ವಿದ್ಯಾರ್ಥಿಗಳಿಗೆ ನೀಡಲು ನಿರ್ಣಯಿಸಲಾಯಿತು. ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿಯೇ ಎಸ್.ಸಿ./ ಎಸ್.ಟಿ. ವಿದ್ಯಾರ್ಥಿಗಳಿಂದ ಸ್ಕಾಲರ್‌ಶಿಪ್ ಬಂದ ಕೂಡಲೇ 'ಪ್ರವೇಶ ಶುಲ್ಕ ಪಾವತಿಸುತ್ತೇವೆ' ಎಂದು ವಿಶ್ವವಿದ್ಯಾಲಯದಿಂದ ನೀಡುವ ನಮೂನೆಯಲ್ಲಿ ಮುಚ್ಚಳಿಕೆ ಪಡೆಯಲು ನಿರ್ಣಯಿಸಲಾಯಿತು.

ಎಸ್.ಬಿ.ಐ. ಬ್ಯಾಂಕ್, ಜ್ಞಾನಸಹ್ಯಾದ್ರಿ ಶಾಖೆಯ ಮ್ಯಾನೇಜರ್‌ರವರನ್ನು ಸಭೆಗೆ ಆಹ್ವಾನಿಸಿ ಸ್ಕಾಲರ್‌ಶಿಪ್ ಬಂದ ಕೂಡಲೇ ವಿಶ್ವವಿದ್ಯಾಲಯಕ್ಕೆ ಪ್ರವೇಶಾತಿ ಶುಲ್ಕ ಪಾವತಿಯಾಗುವಂತೆ ಬ್ಯಾಂಕ್ ಹಂತದಲ್ಲಿ ಯಾವ ರೀತಿಯ ಕ್ರಮವನ್ನು ಕೈಗೊಳ್ಳಬಹುದು ಎಂಬ ಬಗ್ಗೆ ಮಾಹಿತಿ ಪಡೆಯಲಾಯಿತು. ಎಸ್.ಸಿ/ಎಸ್.ಟಿ ಘಟಕದಿಂದ ಸ್ಕಾಲರ್‌ಶಿಪ್‌ಗೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ವಿದ್ಯಾರ್ಥಿಗಳಿಂದ ಪಡೆದು ಬ್ಯಾಂಕ್ ಮ್ಯಾನೇಜರ್‌ರವರಿಗೆ ಕಳುಹಿಸಿಕೊಡಲು ತೀರ್ಮಾನಿಸಲಾಯಿತು.

**2026-ಸಿಂ-4.06(ಬಿ):** 2026-27ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕೋತ್ತರ ಪದವಿ ಹಾಗೂ ಇತರೆ ಪ್ರಮಾಣ ಪತ್ರಗಳ ಶುಲ್ಕವನ್ನು ಪರಿಷ್ಕರಣೆ ಮಾಡುವ ಕುರಿತು.

**ಚರ್ಚೆ:** ವಿಶ್ವವಿದ್ಯಾಲಯದ 2026-27ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕೋತ್ತರ ಪದವಿ ಹಾಗೂ ಇತರೆ ಪ್ರಮಾಣ ಪತ್ರಗಳ ಶುಲ್ಕ ಪರಿಷ್ಕರಣೆಗೆ ಸಂಬಂಧಿಸಿದಂತೆ ರಚಿಸಲಾಗಿದ್ದ ಸಮಿತಿಯು ಸರ್ಕಾರದ ಏಕರೂಪ ಶುಲ್ಕಗಳ ಆಧಾರದ ಮೇಲೆ ಶುಲ್ಕ ಪರಿಷ್ಕರಣೆ ಕುರಿತು ಚರ್ಚಿಸಿರುತ್ತದೆ. 2023ರಲ್ಲಿ ಸರ್ಕಾರವು ನಿಗದಿಪಡಿಸಿದ ಏಕರೂಪ ಶುಲ್ಕವನ್ನು 2023-24ನೇ ಸಾಲಿನಿಂದ ಜಾರಿಮಾಡುವಂತೆ ತಿಳಿಸಿದ್ದು, ಇದುವರೆವಿಗೂ ಏಕರೂಪ ಶುಲ್ಕಕ್ಕೆ ಪೂರ್ಣ ಪ್ರಮಾಣದಲ್ಲಿ ಜಾರಿಯಾಗದೇ ಇರುವುದಕ್ಕೆ ಸರ್ಕಾರವು ವಿವರಣೆಯನ್ನು ಕೇಳಿರುವುದನ್ನು ಸಮಿತಿಯು ಮನಗಂಡು ಸರ್ಕಾರವು ನಿಗದಿಪಡಿಸಿದ ಏಕರೂಪ ಶುಲ್ಕಕ್ಕೆ ಸಮಾನವಾಗಿ ವಿಶ್ವವಿದ್ಯಾಲಯವು ಶುಲ್ಕ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

ಪರಿಷ್ಕರಣೆಯನ್ನು ಮಾಡಬೇಕಾಗಿರುವುದರಿಂದ 2025–26ರಲ್ಲಿ ನಿಗದಿಪಡಿಸಲಾಗಿದ್ದ ಶುಲ್ಕಗಳಲ್ಲಿ ಶೇ.30ರಷ್ಟು ಹೆಚ್ಚಿಸಿ, ಏಕರೂಪ ಶುಲ್ಕಕ್ಕೆ ಆಸುಪಾಸಿನಲ್ಲಿರುವಂತೆ ನಿಗದಿಪಡಿಸಲು ಹಾಗೂ ಇತರೆ ಪ್ರಮಾಣ ಪತ್ರಗಳ ಶುಲ್ಕವನ್ನು ಶೇ.10ರಷ್ಟು ಹೆಚ್ಚಿಸಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ ಎಂದು ಕುಲಸಚಿವರು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಶುಲ್ಕ ಪರಿಷ್ಕರಣಾ ಸಮಿತಿ ಶಿಫಾರಸ್ಸು ಮಾಡಿರುವಂತಹ ಶುಲ್ಕಗಳನ್ನು ಅನುಮೋದಿಸಿದ ಸಭೆಯು 2026–27ನೇ ಶೈಕ್ಷಣಿಕ ಸಾಲಿನಿಂದ ಎಲ್ಲಾ ಸ್ನಾತಕೋತ್ತರ ಪದವಿ ಹಾಗೂ ಇತರೆ ಪ್ರಮಾಣ ಪತ್ರಗಳ ಶುಲ್ಕವನ್ನು ಪರಿಷ್ಕರಣೆ ಮಾಡಲು ಒಪ್ಪಿಗೆ ನೀಡಿತು.

ಹಾಗೂ ಬಿ.ಪಿ.ಇಡಿ. ಮತ್ತು ಎಂಪಿ.ಇಡಿ. ಪದವಿಗಳ ಶುಲ್ಕವು ಈಗಾಗಲೇ ಸರ್ಕಾರದ ಏಕರೂಪ ಶುಲ್ಕಕ್ಕೆ ಸಮಾನವಾಗಿರುವುದರಿಂದ ಅದರಲ್ಲಿ ಯಾವುದೇ ಹೆಚ್ಚಳ ಮಾಡದಿರಲು ನಿರ್ಣಯಿಸಿತು.

**2026–ಸಿಂ–4.06(ಸಿ):** 2026–27ನೇ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ಸಮಯದಲ್ಲಿ ಸಾಮಾನ್ಯ ವಿದ್ಯಾರ್ಥಿಗಳಿಗೆ ನಿಗದಿಪಡಿಸುವ ಶುಲ್ಕವನ್ನೇ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೂ ನಿಗದಿಪಡಿಸಿ ಪ್ರವೇಶಾತಿ ಸಮಯದಲ್ಲಿ ಪೂರ್ಣ ಪ್ರಮಾಣದ ಶುಲ್ಕವನ್ನು ಪಾವತಿಸಿಕೊಳ್ಳುವ ಕುರಿತು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಪ್ರಸ್ತುತ ಪದವಿಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ 2026–27ನೇ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ಸಮಯದಲ್ಲಿ ಸಾಮಾನ್ಯ ವಿದ್ಯಾರ್ಥಿಗಳಿಗೆ ನಿಗದಿಪಡಿಸುವ ಶುಲ್ಕವನ್ನೇ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೂ ನಿಗದಿಪಡಿಸಿ ಪ್ರವೇಶಾತಿ ಸಮಯದಲ್ಲಿ ಪೂರ್ಣ ಪ್ರಮಾಣದ ಶುಲ್ಕವನ್ನು ಪಾವತಿಸಿಕೊಳ್ಳುವ ವಿಷಯಕ್ಕೆ ಸಭೆಯು ಅನುಮೋದನೆ ನೀಡದೇ ಇರಲು ನಿರ್ಣಯಿಸಲಾಯಿತು. ಆದರೆ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಶುಲ್ಕ ಮರುಭರಿಕೆ ಆದ ನಂತರ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಉಳಿದ ಮೊತ್ತವನ್ನು ಕಡ್ಡಾಯವಾಗಿ ಪಾವತಿಸಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

## ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಘಟಕ

**2026–ಸಿಂ–4.07:** ಕು. ರಾಜೇಶ್ವರಿ ಎಮ್ಮಿ ಇವರ ಶಿಷ್ಯವೇತನದ ಹುಂಡಿ ರೂ.80,000–00 ಗಳನ್ನು ಪಾವತಿಸಲು ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸುತ್ತಿರುವ ಕುರಿತು.

**ಚರ್ಚೆ:** ಮಾನ್ಯ ಕುಲಪತಿಗಳು ವಿಷಯ ಮಂಡಿಸಿ ಮಾತನಾಡುತ್ತಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪಿಹೆಚ್.ಡಿ ಸಂಶೋಧನಾರ್ಥಿಯಾದ ಕು. ರಾಜೇಶ್ವರಿ ಎಮ್ಮಿ ಇವರು ಇಂಟರನ್‌ಶಿಪ್ ಗಾಗಿ ಆರು ತಿಂಗಳ ಅವಧಿಗೆ ತೈವಾನ್ ದೇಶಕ್ಕೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ಅನುಮತಿಯ ಮೇರೆಗೆ ತೆರಳಿದ್ದರು. ಸದರಿ ಅವಧಿಯಲ್ಲಿ ಇಂಟರನ್‌ಷಿಪ್ ಮಾಡುತ್ತಿದ್ದ ಸಂಸ್ಥೆಯಿಂದ ಅಲೋಯನ್ಸ್ ನೀಡಿರುತ್ತಾರೆ. ಸದರಿ ಸಂಶೋಧನಾರ್ಥಿಯು ಇಂಟರನ್‌ಶಿಪ್ ಮುಗಿಸಿ ವಿಶ್ವವಿದ್ಯಾಲಯಕ್ಕೆ ಮರಳಿ ಬಂದ ನಂತರ ತಾವು ಪಡೆಯುತ್ತಿದ್ದ ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸಿರುತ್ತಾರೆ ಆದರೆ ಇಂಟರನ್‌ಶಿಪ್ ಅವಧಿಯ ಹಾಜರಾತಿ ಲಭ್ಯವಿಲ್ಲದ ಕಾರಣ ಮಂಜೂರಾಗಿರುವುದಿಲ್ಲ. ನಂತರ ವಿಶ್ವವಿದ್ಯಾಲಯದಿಂದ ಸದರಿ ಫೆಲೋಶಿಪ್ ನೀಡುವಂತೆ ಅರ್ಜಿ ಸಲ್ಲಿಸಿದರೂ ಫೆಲೋಶಿಪ್ ನೀಡಿರುವುದಿಲ್ಲ, ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಬೇರೆ ದೇಶಕ್ಕೆ ತೆರಳಿ ಇಂಟರನ್‌ಶಿಪ್ ಮಾಡುತ್ತಿದ್ದಾರೆ ಎಂದು ಹೆಮ್ಮೆ ಪಡಬೇಕು ಹಾಗೂ ಪ್ರೋತ್ಸಾಹ ನೀಡಬೇಕು ಆದ್ದರಿಂದ ಕು. ರಾಜೇಶ್ವರಿ ಎಮ್ಮಿ ಇವರ ಶಿಷ್ಯವೇತನದ ಹುಂಡಿ ರೂ.80,000–00(ರೂಪಾಯಿ ಎಂಭತ್ತು ಸಾವಿರ ಮಾತ್ರ)ಗಳನ್ನು ಪಾವತಿಸಲು ಸಿಂಡಿಕೇಟ್ ಸಭೆಯ ಅನುಮತಿ ಕೋರಿದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ



Scanned with OKEN Scanner

ಹಣಕಾಸು ಅಧಿಕಾರಿಗಳು ಮಾತನಾಡುತ್ತಾ, ಸರ್ಕಾರದ ಹಿಂದುಳಿದ ವರ್ಗಗಳ ಇಲಾಖೆಯಿಂದ ಹಾಜರಾತಿ ನೀಡದೇ ಇರುವುದರಿಂದ ಹಣಕಾಸು ವಿಭಾಗದಿಂದ ಅವರ ಫೆಲೋಶಿಫ್ ಪಾವತಿಯಾಗಿಲ್ಲವೆಂದರು.

ಕುಲಸಚಿವರು ಮಾತನಾಡುತ್ತಾ, ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ವಿಳಂಬವಾಗಿರುವುದರಿಂದ ನೀಡಲು ಅವಕಾಶವಿರುವುದಿಲ್ಲವೆಂದರು. ಸದಸ್ಯರಾದ ಶ್ರೀಪಾಲ್ ರವರು ಮಾತನಾಡುತ್ತಾ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅವರಿಗೆ ತೊಂದರೆಯಾಗದಂತೆ ನೀಡುವ ಬಗ್ಗೆ ಪರಿಗಣಿಸಬಹುದೆಂದರು.

ನಿರ್ಣಯ: ಚರ್ಚೆಯ ನಂತರ ಕು. ರಾಜೇಶ್ವರಿ ಎಮ್ಮಿ ಇವರ ಶಿಷ್ಯವೇತನದ ಹುಂಡಿ ರೂ.80,000-00 (ರೂಪಾಯಿ ಎಂಭತ್ತು ಸಾವಿರ ಮಾತ್ರ) ಗಳನ್ನು ಪಾವತಿಸಲು ಸಿಂಡಿಕೇಟ್ ಸಭೆಯು ಅನುಮತಿಸಿತು.

## ಹಣಕಾಸು ವಿಭಾಗ

**2026-ಸಿಂ-4.08:** 2025-26ನೇ ಆರ್ಥಿಕ ವರ್ಷದ ಚತುರ್ಥ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅವಗಾಹನೆಗಾಗಿ ಸಲ್ಲಿಸಿದೆ.

ಚರ್ಚೆ: ದಿನಾಂಕ:23-03-2026 ರಂದು ನಡೆದ 2025-26ನೇ ಆರ್ಥಿಕ ವರ್ಷದ ಚತುರ್ಥ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಮಂಡಿಸಿ ಮಾತನಾಡಿದ ಹಣಕಾಸು ಅಧಿಕಾರಿಗಳು ಸದರಿ ಸಭೆಯಲ್ಲಿ 2026-27ನೇ ಸಾಲಿನ ಆಯ-ವ್ಯಯದಲ್ಲಿ 12882.47ಲಕ್ಷಗಳ ಸ್ವೀಕೃತಿಯಲ್ಲಿ 18196.07ಲಕ್ಷಗಳ ವೆಚ್ಚಕ್ಕೆ 5313.60ಲಕ್ಷಗಳ ಕೊರತೆ ಆಯ-ವ್ಯಯವನ್ನು ಅನುಮೋದಿಸುವ ಸಂದರ್ಭದಲ್ಲಿ ಸರ್ಕಾರದ ಆದೇಶದನ್ವಯ ವಿಶ್ವವಿದ್ಯಾಲಯದ ಹೊರಗುತ್ತಿಗೆ ನೌಕರರನ್ನು ಹಾಗೂ ಅತಿಥಿ ಉಪನ್ಯಾಸಕರನ್ನು ಕಡಿತಗೊಳಿಸುವ ಷರತ್ತಿಗೆ ಒಳಪಟ್ಟು ಸಮರ್ಪಕ ಹಣಕಾಸು ನಿರ್ವಹಣೆ ಮಾಡಲು ನಿರ್ಣಯಿಸಿ ಅಂದಾಜು ಆಯ-ವ್ಯಯವನ್ನು ಅನುಮೋದಿಸಲಾಗಿದೆ ಎಂದು ತಿಳಿಸಿದರು. ಈ ಷರತ್ತಿಗೆ ಒಳಪಟ್ಟು ಸಭೆಯು ಆಯ-ವ್ಯಯ ಅನುಮೋದಿಸಿರುವುದರಿಂದ ಅದರಲ್ಲಿನ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ ಎಂದರು ಹಾಗೂ ಪಿಂಚಣಿ ಹೆಚ್ಚುವರಿ ಬೇಡಿಕೆಯನ್ನು ಸರ್ಕಾರವು ಪರಿಗಣಿಸಬೇಕಾದರೆ ಹಣಕಾಸು ಸಮಿತಿ ನಡಾವಳಿಯಲ್ಲಿ ಷರತ್ತುಗಳನ್ನು ಪಾಲಿಸಬೇಕಾಗಿರುತ್ತದೆ. ಪ್ರಸ್ತುತ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಲ್ಲಿ 1207.09 ಲಕ್ಷ ಅತಿಥಿ ಉಪನ್ಯಾಕರ ವೇತನ ಹಾಗೂ 1002.02 ರಷ್ಟು ಹೊರಗುತ್ತಿಗೆ ವೇತನ ಪಾವತಿಸುತ್ತಿದ್ದು, ಅಗತ್ಯಕ್ಕಿಂತ ಹಾಗೂ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಹೆಚ್ಚುವರಿ ಪಡೆದಿರುವ ಹೊರಗುತ್ತಿಗೆ ನೌಕರರನ್ನು ಹಾಗೂ ಅತಿಥಿ ಉಪನ್ಯಾಸಕರನ್ನು ಕಡಿಮೆ ಮಾಡದ ಹೊರತು ಸರ್ಕಾರದಿಂದ ಹೆಚ್ಚುವರಿ ಪಿಂಚಣಿ ಮೊತ್ತವನ್ನು ಕೋರಲು ಸಾಧ್ಯವಾಗುವುದಿಲ್ಲ. ಹಾಗೂ ಸ್ವಂತ ಸಂಪನ್ಮೂಲದಲ್ಲಿ ಪಿಂಚಣಿ ವಂತಿಕೆಯನ್ನು ವರ್ಷವಾರು ಮೀಸಲಿಡಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು. ಮುಂದುವರೆದು ಪ್ರಸಕ್ತ ಸಾಲಿನಲ್ಲಿ ಸುಮಾರು 30 ಜನ ಪ್ರಾಧ್ಯಾಪಕರು/ಅಧಿಕಾರಿ/ಸಿಬ್ಬಂದಿಗಳು ನಿವೃತ್ತಿ ಹೊಂದುತ್ತಿದ್ದು ಪ್ರಸ್ತುತ ಕೊರತೆ ಇರುವ ರೂ.5313.60 ಲಕ್ಷಗಳ ಪಿಂಚಣಿ ಮೊತ್ತವು ಮುಂದಿನ ಸಾಲಿನಲ್ಲಿ ಸುಮಾರು 70.00 ಕೋಟಿಯನ್ನು ಮೀರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಪ್ರೊ.ಸಾಕಮ್ಮ ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲವನ್ನು ಹೆಚ್ಚಿಸಲು ದೂರಶಿಕ್ಷಣ ಕೇಂದ್ರವನ್ನು ಪ್ರಾರಂಭಿಸುವುದು ಸೂಕ್ತವೆಂದರು.

ಕುಲಸಚಿವರು ಮಾತನಾಡುತ್ತಾ, ಅನಾವಶ್ಯಕ ಹುದ್ದೆಗಳನ್ನು ಕಡಿತ ಮಾಡಲಾಗುವುದು ಎಂದರು. ಸದಸ್ಯರಾದ ಶ್ರೀ. ಶ್ರೀಪಾಲ್‌ರವರು ಮಾತನಾಡಿ ವಿಶ್ವವಿದ್ಯಾಲಯದ ಹಿತದೃಷ್ಟಿಯನ್ನು ಗಮನಿಸಿ ಕ್ರಮ ಕೈಗೊಳ್ಳುವುದು ಸೂಕ್ತವೆಂದರು. ಸದಸ್ಯರಾದ ಪ್ರೊ.ಚಂದ್ರಶೇಖರ್ ಮಾತನಾಡಿ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

ಇತ್ತೀಚಿನ ದಿನಗಳಲ್ಲಿ ಹಲವಾರು ಬೋಧಕ- ಬೋಧಕೇತರ ಸಿಬ್ಬಂದಿಗಳು ವಯೋನಿವೃತ್ತಿ ಹೊಂದುತ್ತಿದ್ದು ನಿವೃತ್ತಿ ಸೌಲಭ್ಯ ಸಮಯಕ್ಕೆ ಸರಿಯಾಗಿ ಲಭ್ಯವಾಗುತ್ತಿಲ್ಲವೆಂದರು. ಇದಕ್ಕೆ ಉತ್ತರಿಸಿದ ಹಣಕಾಸು ಅಧಿಕಾರಿಗಳು ನಿವೃತ್ತಿ ಸೌಲಭ್ಯಕ್ಕಾಗಿ ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡುವಾಗ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳುವಂತೆ ಸೂಚಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ 2025-26ನೇ ಆರ್ಥಿಕ ವರ್ಷದ ಚತುರ್ಥ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**2026-ಸಿಂ-4.09:** 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯ ಅನುಮೋದನೆ ಕುರಿತು.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾಲಯದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳ ಅನುಪಾಲನಾ ವರದಿಯು ಸ್ವೀಕೃತವಾಗಿದ್ದು ಇದನ್ನು ಅನುಮೋದನೆಗಾಗಿ ಮಂಡಿಸಲಾಗಿದ್ದು ನಂತರ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ ಎಂದರು.

ಕುಲಸಚಿವರು ಮಾತನಾಡಿ ಸದರಿ ವರದಿಯಲ್ಲಿ ಆಕ್ಷೇಪಣೆ ಮತ್ತು ವಸೂಲಾತಿ ಎರಡು ಭಾಗಗಳಿದ್ದು ಇವುಗಳಲ್ಲಿ ಪ್ರತಿಯೊಂದು ಆಕ್ಷೇಪಣೆ ಮತ್ತು ವಸೂಲಾತಿ ಇವುಗಳನ್ನು ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಬೇಕಾಗಿದೆ ಎಂದರು.

ಹಣಕಾಸು ಅಧಿಕಾರಿಗಳು ವಿಶ್ವವಿದ್ಯಾಲಯದ 2022-23 ಮತ್ತು 2023-24ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳಲ್ಲಿನ ಕೆಳಕಂಡ ಆಕ್ಷೇಪಣೆ ಮತ್ತು ವಸೂಲಾತಿ ವಿವರಗಳ ಕುರಿತು ಚರ್ಚಿಸಿದರು.

**ಕುವೆಂಪು ವಿಶ್ವವಿದ್ಯಾಲಯದ 2022-23 ನೇ ಹಾಗೂ 2023-24 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಆಕ್ಷೇಪಣೆಗಳ ಹಾಗೂ ವಸೂಲಾತಿ ಪ್ರಕರಣಗಳ ತಃಖ್ತೆ**

| ಕ್ರ ಸಂ | ಕಂಡಿಕೆ | ವಿವರ | ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) |
|---|---|---|---|---|
| 1 | 5.11 | ಇತರೆ ಸ್ವೀಕೃತಿಗಳಿಗೆ ವಿವರಗಳಿಲ್ಲದಿರುವುದು | 5,29,92,000 | |
| 2 | 5.15 | ನಗದುಪುಸ್ತಕ ಮತ್ತು ಬ್ಯಾಂಕ್ ಖಾತೆಗಳಲ್ಲಿನ ವ್ಯತ್ಯಾಸದ ಮೊತ್ತ | 14,74,646.00 | |
| 3 | 11.2 | ವಿಶ್ವವಿದ್ಯಾಲಯದ ಉಳಿತಾಯ ಖಾತೆಗಳಲ್ಲಿ ಬ್ಯಾಂಕ್ ಚಾರ್ಜಸ್ ಕಟಾಯಿಸಿರುವುದು | | 12,84,289.00 |
| 4 | 11.3 | 2022-23 ನೇ ಹಾಗೂ 2023-24 ನೇ ಸಾಲಿನಲ್ಲಿ ಪರೀಕ್ಷಾ ಶುಲ್ಕದ ಸ್ವೀಕೃತಿಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲೆಕ್ಕಸಮನ್ವಯ ಗೊಳಿಸದಿರುವುದು ಹಾಗೂ ಡಿ.ಸಿ.ಬಿ. ನಿರ್ವಹಿಸದಿರುವುದು | 26,64,457.00 | |
| 5 | 11.4 | 2022-23 ಮತ್ತು 2023-24ನೇ ಸಾಲಿನ ಪ್ರವೇಶಾತಿ ಶುಲ್ಕದ ಸ್ವೀಕೃತಿಗಳನ್ನು ಡಿ.ಸಿ.ಬಿ. ಹಾಗೂ ಬ್ಯಾಂಕ್ ಖಾತೆಯೊಂದಿಗೆ ಲೆಕ್ಕಸಮನ್ವಯಗೊಳಿಸದಿರುವುದು | 31,26,000.00 | 1,52,94,000.00 |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ



Scanned with OKEN Scanner

| | | | | |
|---|---|---|---|---|
| 6 | 11.5 | ದೂರಶಿಕ್ಷಣ ನಿರ್ದೇಶನಾಲಯಕ್ಕೆ ಅಧ್ಯಾಯನ/ಕಲಿಕ ಕೇಂದ್ರಗಳಿಂದ ಪ್ರವೇಶಾತಿ ಅನುಮೋದನೆ ಶುಲ್ಕದ ಸ್ವೀಕೃತಿಗಳ ಮೊತ್ತ | | 4,68,22,661.00 |
| 7 | 11.6 | ಸಂಯೋಜಿತ ಕಾಲೇಜುಗಳಿಂದ ಸ್ವೀಕೃತಗೊಂಡ ವಿದ್ಯಾರ್ಥಿಗಳ ಕ್ರೀಡಾ ಶುಲ್ಕಕ್ಕೆ ಉಪಯುಕ್ತ ಪ್ರಮಾಣ ಪತ್ರ ಸಲ್ಲಿಸದಿರುವ ಮೊತ್ತ | 1,65,13,200.00 | |
| 8 | 11.7 | 2022-23 ಮತ್ತು 2023-24ನೇ ಸಾಲಿನ ಎಂ.ಬಿ.ಎ ಮತ್ತು ಎಂ.ಸಿ.ಎ. ಅಧ್ಯಯನ ವಿಭಾಗಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕ | | 54,45,060.00 |
| 9 | 12.1 | 2021-22ನೇ ಸಾಲಿನ ಅವಧಿಗೆ ವಿಶ್ವವಿದ್ಯಾಲಯದ ಆಡಳಿತ ಕಛೇರಿ, ವಿಭಾಗಗಳು ಹಾಗೂ ಕಾಲೇಜುಗಳಲ್ಲಿರುವ ಯು.ಪಿ.ಎಸ್. ಬ್ಯಾಟರಿ ಸಿಸ್ಟಂ, ಜೆರಾಕ್ಸ್ ಯಂತ್ರ ಮತ್ತು ಪ್ರೊಜೆಕ್ಟರ್‌ಗಳ ವಾರ್ಷಿಕ ನಿರ್ವಹಣೆ ಬಾಬ್ತು ಪಾವತಿಸಿರುವುದು. | 38,94,460.00 | |
| 10 | 12.2 | ಉತ್ತರ ಪತ್ರಿಕೆಗಳನ್ನು ತಡವಾಗಿ ಸರಬರಾಜು ಮಾಡಿರುವ ಸಂಬಂಧ M/s Hitech ಮತ್ತು M/s Datacom ಸಂಸ್ಥೆಯವರಿಂದ ದಂಡದ ಮೊತ್ತ | | 2,94,180.00 |
| 11 | 12.3 | ವಿಶ್ವವಿದ್ಯಾಲಯದ 31 ಮತ್ತು 32 ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಕೆ.ಟಿ.ಪಿ.ಪಿ. ನಿಯಮ ಪಾಲಿಸದೆ ಭರಿಸಿದ ವೆಚ್ಚ | 12,33,861.00 | |
| 12 | 12.4 | ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು, ಕಛೇರಿಗಳು ಹಾಗೂ ಘಟಕ ಕಾಲೇಜುಗಳಲ್ಲಿ ಅಳವಡಿಸಿರುವ Sharp Digital Copier, Interactive White Board, Sharp Multimedia Projector ಹಾಗೂ ITC Lectern Podium ಯಂತ್ರಗಳ 2021-22ನೇ ಸಾಲಿಗೆ ಒಂದು ವರ್ಷದ ಅವಧಿಗೆ ಪಾವತಿಸಿರುವ ವಾರ್ಷಿಕ ನಿರ್ವಹಣೆ ವೆಚ್ಚ | 20,44,069.00 | |
| 13 | 12.5 | ದೂರಶಿಕ್ಷಣ ನಿರ್ದೇಶನಾಲಯದಡಿ ನೋಂದಾಯಿಸಿಕೊಂಡ ವಿದ್ಯಾರ್ಥಿಗಳಿಗೆ ಅಧ್ಯಾಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿರುವುದು | 49,14,562.00 | |
| 14 | 12.6 | ಕೆ.ಟಿ.ಪಿ.ಪಿ ನಿಯಮಗಳನ್ನು ಪಾಲಿಸದೆ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸಿರುವ ಸಿಬ್ಬಂದಿಗಳ 05 ತಿಂಗಳ ವೇತನ ಪಾವತಿಸಿರುವುದು ಮತ್ತು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗಳ ವೇತನ ಪಾವತಿ ಬಾಬ್ತು | 7,80,19,626.00 | |
| 15 | 12.7 | ಸ್ಮಾರ್ಟ್ ಕ್ಲಾಸ್‌ಗಳನ್ನು (Smart Class) ಅನುಷ್ಠಾನಗೊಳಿಸಲು ಭರಿಸಿರುವ ವೆಚ್ಚ | 2,99,82,289.00 | |
| 16 | 12.8 | ವಿಶ್ವವಿದ್ಯಾಲಯವು ಭದ್ರತಾ ಠೇವಣಿ ವಹಿ ನಿರ್ವಹಿಸದಿರುವುದು | 38,42,000.00 | |
| 17 | 14.1 | 2022-23 ಹಾಗೂ 2023-24 ನೇ ಸಾಲಿನ ಲೆಕ್ಕಪರಿಶೋಧನೆಗೆ ವಿಶ್ವವಿದ್ಯಾಲಯದಿಂದ ಮೆಸ್ಕಾಂಗೆ BRPHT/02 ಮೀಟರ್ ಸಂಪರ್ಕಕ್ಕೆ ಹೆಚ್ಚುವರಿ ಹಣಪಾವತಿ ಮಾಡಿರುವುದು | 15,58,380.00 | 43,778.00 |



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

Scanned with OKEN Scanner

| | | | | |
|---|---|---|---|---|
| 18 | 20.1 | ಕುಲಸಚಿವರು ಮತ್ತು ಕುಲಸಚಿವರು (ಮೌಲ್ಯಮಾಪನ) ಇವರುಗಳಿಗೆ ಹಂಚಿಕೆಯಾದ ವಸತಿಗೃಹಗಳಿಗೆ ಮನೆಬಾಡಿಗೆ ಭತ್ಯೆಕಡಿತಗೊಳಿಸದೆ ಪಾವತಿಸಿರುವುದು | | 4,06,281.00 |
| 19 | 20.2 | ವಯೋ ನಿವೃತ್ತಿಗೊಂಡಿರುವ ಪ್ರಾಧ್ಯಾಪಕರನ್ನು, ಗೌರವ ಸಂಭಾವನೆ ಆಧಾರದ ಮೇಲೆ ನೇಮಿಸಿಕೊಂಡು ಪಾತಿಸಿರುವುದು | 5,40,000.00 | |
| 20 | 20.3 | ಅತಿಥಿ ಉಪನ್ಯಾಸಕರನ್ನು ಹೆಚ್ಚುವರಿಯಾಗಿ ನೇಮಿಸಿಕೊಂಡು ವೇತನ ಪಾವತಿಸಿ ಬಾಬ್ತು | 11,43,00,000.00 | |
| 21 | 21.2 | ವಿಶ್ವವಿದ್ಯಾಲಯಕ್ಕೆ ಮಂಜೂರಾಗದ ಹುದ್ದೆಗಳಿಗೆದುರಾಗಿ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿ ಮತ್ತು ಮಹಿಳಾ ವೈದ್ಯರನ್ನು, ದೂರ ಶಿಕ್ಷಣ ನಿರ್ದೇಶನಾಲಯಕ್ಕೆ IT Consultant ರನ್ನು ಹಾಗೂ U.U.C.M.S. Portal Admin ರನ್ನು ನೇಮಿಸಿಕೊಂಡು ವೇತನ ಪಾವತಿ ಮಾಡಿರುವುದು | 24,70,000.00 | |
| 22 | 21.3 | ಆಡಿಟ್ ವಸೂಲಾತಿಯಂದು ಸೂಚಿಸಲಾದ ಮೊತ್ತ ಸಿಬ್ಬಂದಿಗಳಿಗೆ ಪಾವತಿಸಿರುವುದು | 1,43,643.00 | |
| 23 | 21.4 | ನಿಯಮಾನುಸಾರ ರಜಾ ಪ್ರಯಾಣ ರಿಯಾಯಿತಿ ಸೌಲಭ್ಯ (LTC) ಪಾವತಿಸದೇ ಇರುವುದು | 5,54,741.00 | |
| 24 | 21.5 | ಪರಿನಿಯಮಗಳಿಲ್ಲದೆ ವಿಶ್ವವಿದ್ಯಾಲಯದ ಅಧಿಕಾರಿ/ಸಿಬ್ಬಂದಿ ವರ್ಗದವರುಗಳ ವೈದ್ಯಕೀಯ ವೆಚ್ಚಗಳ ಮರು ಪಾವತಿಸಿರುವುದು | 4,85,851.00 | |
| 25 | 21.6 | ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಗ್ರಂಥಾಲಯ ಸಹಾಯಕರು ಮತ್ತು ಡ್ರಾಫ್ಟ್ ಮೆನ್ & ಟ್ರೆಸರ್ ರವರಿಗೆ ಪರಿನಿಯಮವಿಲ್ಲದೇ/ಸರ್ಕಾರದ ಅನುಮೋದನೆ ಇಲ್ಲದೆ ಹೆಚ್ಚುವರಿ ವೇತನ ಶ್ರೇಣಿ ನಿಗಧಿಪಡಿಸಿ ವೇತನ ಪಾವತಿಸಿರುವುದು | 1,08,27,858.00 | |
| 26 | 21.7 | ವಿಲೀನಗೊಂಡ ಸಿಬ್ಬಂದಿಗಳ ಸೇವೆಯನ್ನು ರದ್ದುಗೊಳಿಸದೆ ಮುಂದುವರೆಸಿ ವೇತನ ಪಾವತಿಸಿರುವುದು ಮತ್ತು ನಿವೃತ್ತಗೊಂಡ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳನ್ನು ಪಾವತಿಸಿರುವುದು | | 9,73,70,465.00 |
| 27 | 21.8 | ಉನ್ನತೀಕರಿಸಿದ ಹುದ್ದೆಗಳಿಗೆ ನೀಡಲಾದ ಮುಂಬಡ್ತಿಯನ್ನು ರದ್ದುಪಡಿಸಿರುವ ವೇತನ ವ್ಯತ್ಯಾಸದ ಬಾಬ್ತು | | 5,12,234.00 |
| 28 | 23.1 | ಪರಿನಿಯಮವಿಲ್ಲದೆ ಪರೀಕ್ಷಾಂಗ ವಿಭಾಗದ ಅಧಿಕಾರಿ/ಸಿಬ್ಬಂದಿಗಳಿಗೆ ಸಂಭಾವನೆ ಮತ್ತು ಸ್ಥಳೀಯ ಭತ್ಯೆ ಪಾವತಿಸಿರುವ ಬಾಬ್ತು | 56,21,389.00 | |
| 29 | 23.2 | ಪ್ರಯೋಗಿಕ ಮತ್ತು ಸೈದಾಂತಿಕ ಪರಿಕ್ಷೆಗಳಿಗೆ ಹೆಚ್ಚುವರಿಯಾಗಿ ಪಾವತಿಸಿರುವ ಸಂಭವಾನೆ | | 7,815.00 |
| 30 | 23.3 | ಪರೀಕ್ಷಾಂಗ ಕಾರ್ಯಗಳಿಗೆ ವಾಹನ ಚಾಲಕರಿಗೆ ಪಾವತಿಸಿರುವ ಹೆಚ್ಚುವರಿ ದಿನಭತ್ಯೆ | | 7,200.00 |
| 31 | 24.1 | ಪರಿನಿಯಮಗಳಿಲ್ಲದೆ ಪಾವತಿಸಿರುವ ಪ್ರಯಾಣ ಭತ್ಯೆ | 26,02,000.00 | |
| 32 | 24.2 | ಅಂತರ ವಿಶ್ವವಿದ್ಯಾಲಯದ ಪಂದ್ಯಗಳಿಗಾಗಿ ಕ್ರೀಡಾ ತಂಡಗಳನ್ನು ಆಯ್ಕೆಮಾಡಲು ರಚಿಸಲಾದ ಸಮಿತಿ ಸದಸ್ಯರುಗಳಿಗೆ ಪಾವತಿಸಿದ ದಿನಭತ್ಯೆ | 39,100.00 | |
| 33 | 30.1 | ಸಾದಿಲ್ವಾರು ವೆಚ್ಚದ ಕೈಪಿಡಿ 1958 ರ ನಿಯಮಗಳನ್ನು ಮೀರಿ ಎ.ಸಿ ಬಿಲ್ಲುಗಳಲ್ಲಿ ಹಣಸೆಳೆದು ವಿಳಂಬವಾಗಿ ಎನ್.ಡಿ.ಸಿ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿರುವ ಮೊತ್ತ ಹಾಗೂ ವಿಳಂಬಕ್ಕೆ ದಂಡ ಶುಲ್ಕ | 1,04,62,260.00 | 58,16,039.00 |
| | | **ಒಟ್ಟು ಮೊತ್ತ** | **35,03,06,392.00** | **17,33,04,002.00** |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ



Scanned with OKEN Scanner

ನಿರ್ಣಯ: ಪ್ರತಿಯೊಂದು ಕಂಡಿಕೆಯ ಕುರಿತು ಚರ್ಚಿಸಲಾಯಿತು ಹಾಗೂ ಕಂಡಿಕೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಸರ್ಕಾರಕ್ಕೆ ಸಲ್ಲಿಸಲು ಹಾಗೂ ವಸೂಲಾತಿ ಕಂಡಿಕೆಗಳ ಮೊತ್ತವನ್ನು ನಿಯಮಾನುಸಾರ ವಸೂಲಿಸುವ ಕುರಿತು ಚರ್ಚಿಸಲಾಯಿತು. ಚರ್ಚೆಯ ನಂತರ 2022–23 ಮತ್ತು 2023–24 ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳಿಗೆ ಈಗಾಗಲೇ ವಿಶ್ವವಿದ್ಯಾಲಯದಿಂದ ಸಲ್ಲಿಸಲಾಗಿರುವ ಅನುಪಾಲನಾ ವರದಿಯನ್ನು ಪರಿಶೀಲಿಸಲು ರಾಜ್ಯ ಲೆಕ್ಕ ಪತ್ರ ಮತ್ತು ಲೆಕ್ಕಪರಿಶೋಧನೆ ಇಲಾಖೆಯಿಂದ ಪುನರ್ ಪರಿಶೀಲನಾ ಸಭೆಯನ್ನು ನಡೆಸಿ ಅಂತಿಮ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಸೂಚಿಸಲಾಗಿರುವ ಪ್ರತಿಯೊಂದು ಕಂಡಿಕೆಗೆ ಅನುಪಾಲನ ವರದಿಯನ್ನು ಕನ್ನಡ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಸಿದ್ಧಪಡಿಸಿದ್ದು, ಇದನ್ನು ಅನುಮೋದಿಸಿ ನಿಯಮಾನುಸಾರ ಸರ್ಕಾರಕ್ಕೆ ಸಲ್ಲಿಸಲು ಅಗತ್ಯ ಕ್ರಮಕೈಗೊಳ್ಳಲು ಹಣಕಾಸು ಅಧಿಕಾರಿಗಳಿಗೆ ನಿರ್ದೇಶಿಸಲಾಯಿತು.

**2026–ಸಿಂ–4.10:** ಎ.ಸಿ. ಬಿಲ್ಲಿನಲ್ಲಿ ಮುಂಗಡ ಪಡೆದ ಮೊತ್ತಕ್ಕೆ ಎನ್.ಡಿ.ಸಿ. ಸಲ್ಲಿಸದಿರುವ ಕುರಿತು.

ಚರ್ಚೆ: ಹಣಕಾಸು ಅಧಿಕಾರಿಗಳು ವಿಷಯ ಮಂಡಿಸಿ ಕ್ರೀಡಾ ವಿಭಾಗ ಮತ್ತು ಪರೀಕ್ಷಾ ವಿಭಾಗದಿಂದ ಎ.ಸಿ.ಬಿಲ್ಲಿನಲ್ಲಿ ಮುಂಗಡ ಪಡೆದ ಮೊತ್ತಕ್ಕೆ ಎನ್.ಡಿ.ಸಿ. ಸಲ್ಲಿಸದಿರುವ ಕುರಿತು ಸಭೆಯ ಗಮನಕ್ಕೆ ತಂದರು. ಸದಸ್ಯರಾದ ಶ್ರೀ. ಶಶಿಧರ ಇವರು ಮಾತನಾಡಿ ಇಷ್ಟು ದೊಡ್ಡ ಮೊತ್ತವನ್ನು ಎ.ಸಿ. ಹುಂಡಿಯಲ್ಲಿ ನೀಡಿರುವುದು ಸರಿಯೇ ಎಂದರು. ತುರ್ತು ಸಂದರ್ಭದಲ್ಲಿ ಮಾತ್ರ ಎ.ಸಿ ಹುಂಡಿಯನ್ನು ನೀಡಲು ಅವಕಾಶವಿರುವುದಲ್ಲವೇ ಎಂದರು. ಇದಕ್ಕೆ ಉತ್ತರಿಸಿದ ಹಣಕಾಸು ಅಧಿಕಾರಿಗಳು ನಿಯಮಾನುಸಾರ ರೂ.02 ಲಕ್ಷದವರೆಗೆ ಮಾತ್ರ ಎ.ಸಿ ಹುಂಡಿಯಲ್ಲಿ ಮುಂಗಡ ಪಡೆಯಲು ಅವಕಾಶವಿರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ದೈಹಿಕ ಶಿಕ್ಷಣ ನಿರ್ದೇಶಕರನ್ನು ಸಭೆಗೆ ಆಹ್ವಾನಿಸಿ ಕ್ರೀಡಾ ವಿಷಯಗಳಿಗೆ ಸಂಬಂಧಿಸಿದಂತೆ ಎ.ಸಿ. ಹುಂಡಿಯಲ್ಲಿ ಪಡೆದಿರುವ ಬಗ್ಗೆ ಸಭೆಗೆ ವಿವರಣೆ ನೀಡುವಂತೆ ತಿಳಿಸಿದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ.ಎನ್.ಡಿ. ವಿರೂಪಾಕ್ಷ ಇವರು ತಾವು ವಿವಿಧ ಕ್ರೀಡೆಗಳಿಗೆ ತಂಡಗಳನ್ನು ಕಳುಹಿಸುವಾಗ ಎದುರಿಸುವ ಸಮಸ್ಯೆಗಳನ್ನು ಸಭೆಗೆ ವಿವರಿಸಿದರು. ವಿದ್ಯಾರ್ಥಿಗಳಿಗೆ ಮುಂಚಿತವಾಗಿ ಪ್ರಯಾಣದ ವ್ಯವಸ್ಥೆಯನ್ನು ಮಾಡಬೇಕಾಗಿರುವುದರಿಂದ ಎ.ಸಿ. ಬಿಲ್ಲಿನಲ್ಲಿ ಮುಂಗಡ ಪಡೆಯಲೇ ಬೇಕಾಗುತ್ತದೆ ಎಂಬ ಅಂಶವನ್ನು ವಿವರಿಸಿದರು.

ಕುಲಸಚಿವರು ಮಾತನಾಡಿ ಪ್ರತಿ ಇವೆಂಟ್‌ಗೂ ಪ್ರತ್ಯೇಕವಾಗಿ ಎ.ಸಿ. ಬಿಲ್ಲಿನಲ್ಲಿ ಮೊತ್ತ ಪಡೆದು ಎನ್.ಡಿ.ಸಿ. ಸಲ್ಲಿಸಬೇಕು ಎಂದು ತಿಳಿಸಿದರು. ಮುಂದುವರೆದು ಮಾತನಾಡಿ ಈ ರೀತಿಯ ಪ್ರಕರಣಗಳಲ್ಲಿ ಆಡಿಟ್ ಆಕ್ಷೇಪಣೆಯಾಗದಂತೆ ಯಾವ ರೀತಿ ಕ್ರಮಕೈಗೊಳ್ಳಬಹುದು ಎಂದು ತಿಳಿಸುವಂತೆ ಸೂಚಿಸಿದರು.

ನಿಯಮಗಳ ಪ್ರಕಾರ 02 ಲಕ್ಷದವರೆಗೆ ಎ.ಸಿ ಬಿಲ್ಲಿನಲ್ಲಿ ಪಡೆಯಲು ಅವಕಾಶವಿದೆ. ಮತ್ತು ಎನ್.ಡಿ.ಸಿ ಹುಂಡಿಯನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶವಿದೆ ಎಂದರು. ಸದಸ್ಯರಾದ ಶ್ರೀ. ಶಶಿಧರ್ ಇವರು ಮಾತನಾಡಿ ಎನ್.ಡಿ.ಸಿ ನೀಡಲು ಆಗಿರುವ ವಿಳಂಬದ ಬಗ್ಗೆ ಕೇಳಿದರು.

ಮುಂದುವರೆದು 34ನೇ ಘಟಿಕೋತ್ಸವದ ಖರ್ಚು–ವೆಚ್ಚಕ್ಕಾಗಿ ಪ್ರೊ. ಎಸ್.ಎಂ. ಗೋಪಿನಾಥ್, ಹಿಂದಿನ ಕುಲಸಚಿವರು(ಮೌಲ್ಯಮಾಪನ)ರವರು ರೂ.40 ಲಕ್ಷಗಳನ್ನು(ರೂಪಾಯಿ ನಲವತ್ತು ಲಕ್ಷ ಮಾತ್ರ) ಎ.ಸಿ. ಹುಂಡಿಯಲ್ಲಿ ಪಡೆದಿದ್ದು ಎನ್.ಡಿ.ಸಿ. ಸಲ್ಲಿಸದೇ ಇರುವುದನ್ನು ಸಭೆಯ ಗಮನಕ್ಕೆ ತಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಕೆಳಕಂಡಂತೆ ನಿರ್ಣಯಿಸಲಾಯಿತು.

1. ದೈಹಿಕ ಶಿಕ್ಷಣ ವಿಭಾಗದಿಂದ ಎ.ಸಿ.ಬಿಲ್ಲಿನಲ್ಲಿ ಮುಂಗಡ ಪಡೆದ ಮೊತ್ತಕ್ಕೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಇದೊಂದು ಬಾರಿಗೆ ಮಾತ್ರ ಎನ್.ಡಿ.ಸಿ. ಹುಂಡಿಯನ್ನು ಎರಡು ತಿಂಗಳೊಳಗಾಗಿ ಹಣಕಾಸು ವಿಭಾಗಕ್ಕೆ ಸಲ್ಲಿಸುವುದು. ಹಾಗೂ ಇನ್ನು ಮುಂದೆ ಪ್ರತಿ ಇವೆಂಟ್‌ಗೂ ಪ್ರತ್ಯೇಕವಾಗಿ ಎ.ಸಿ. ಬಿಲ್ಲಿನಲ್ಲಿ ಮೊತ್ತ ಪಡೆದು ಎನ್.ಡಿ.ಸಿ. ಹುಂಡಿಯನ್ನು ಒಂದು ತಿಂಗಳೊಳಗಾಗಿ ಸಲ್ಲಿಸಬೇಕು ಎಂದು ನಿರ್ಣಯಿಸಲಾಯಿತು. ಮತ್ತು ಒಂದು ಇವೆಂಟ್‌ಗೆ ಪಡೆಯುವ ಮೊತ್ತವನ್ನು ಬೇರೆ ಇವೆಂಟ್‌ಗೆ ಬಳಸಬಾರದೆಂದು ತಿಳಿಸಲಾಯಿತು.
2. 34ನೇ ಘಟಿಕೋತ್ಸವದ ಖರ್ಚು-ವೆಚ್ಚಕ್ಕಾಗಿ ಪ್ರೊ. ಎಸ್. ಎಂ. ಗೋಪಿನಾಥ್, ಹಿಂದಿನ ಕುಲಸಚಿವರು(ಮೌಲ್ಯಮಾಪನ)ರವರು ರೂ. 40 ಲಕ್ಷಗಳನ್ನು (ರೂಪಾಯಿ ನಲವತ್ತು ಲಕ್ಷಗಳು ಮಾತ್ರ)ಗಳನ್ನು ಎ.ಸಿ. ಹುಂಡಿಯಲ್ಲಿ ಪಡೆದು ಖರ್ಚು ಮಾಡಿರುವ ಕುರಿತು ಕುಲಸಚಿವ(ಮೌಲ್ಯಮಾಪನ) ಇವರಿಂದ ಒಂದು ವರದಿಯನ್ನು ಪಡೆದು ನಂತರ ಹಣಕಾಸು ವಿಭಾಗದಿಂದ ಘಟಿಕೋತ್ಸವದ ಖರ್ಚು-ವೆಚ್ಚಗಳ ಬಗ್ಗೆ ವಿಶೇಷ ಆಡಿಟ್ ಮಾಡಿಸಿ ಹತ್ತು ದಿನಗಳೊಳಗೆ ವರದಿ ಸಲ್ಲಿಸಿದ ನಂತರ ಸರ್ಕಾರಕ್ಕೆ ವರದಿ ಮಾಡಲು ನಿರ್ಣಯಿಸಲಾಯಿತು.

2026-ಸಿಂ-4.11: ಪಿಂಚಣಿ ಸೌಲಭ್ಯಗಳಿಗೆ ಆಂತರಿಕ ಸಂಪನ್ಮೂಲದಲ್ಲಿ ಅನುದಾನ ಒದಗಿಸುವ ಕುರಿತು.

ಚರ್ಚೆ: ವಿಷಯ ಮಂಡಿಸಿ ಮಾತನಾಡಿದ ಹಣಕಾಸು ಅಧಿಕಾರಿಗಳು ಪಿಂಚಣಿ ಸೌಲಭ್ಯಗಳಿಗಾಗಿ ಅನುದಾನ ಕೋರಿದ ಪ್ರಸ್ತಾವನೆಗೆ ಸರ್ಕಾರದ ದಿನಾಂಕ:31-03-2026 ರ ಪತ್ರದಲ್ಲಿ ಅನುದಾನ ಮಂಜೂರು ಮಾಡಲು ಈ ಕೆಳಕಂಡ ತತ್ವಗಳ ಆಧಾರದ ಮೇಲೆ ಮಂಜೂರು ಮಾಡಲು ಕ್ರಮವಹಿಸಲಾಗುವುದು ಎಂದು ತಿಳಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

1.ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಸಿಬ್ಬಂದಿಗಳನ್ನು ನೇಮಿಸಿಕೊಂಡಿರುವುದನ್ನು ಕಡಿತಗೊಳಿಸಿದಲ್ಲಿ ಒಟ್ಟು ಪಿಂಚಣಿ ಕೋರಿಕೆಯಲ್ಲಿ ಶೇ 50 ರಷ್ಟು ಸರ್ಕಾರದಿಂದ ಒದಗಿಸಲು ಕ್ರಮವಹಿಸಲಾಗುವುದು.

2.ಪಿಂಚಣಿ ಬೇಡಿಕೆಗನುಸಾರವಾಗಿ ಆಂತರಿಕ ಸಂಪನ್ಮೂಲದಲ್ಲಿ ಶೇಕಡಾವಾರು ಮೊತ್ತವನ್ನು ಪಿಂಚಣಿ ನಿಧಿಗಾಗಿ ಪ್ರತ್ಯೇಕವಾಗಿ ಠೇವಣಿ ಇಡಲು ಕ್ರಮವಹಿಸುವುದು.

3. ಸರ್ಕಾರದ ಸೂಚನೆಗಳಂತೆ ಕ್ರಮವಹಿಸದೆ ಆಡಳಿತಾತ್ಮಕ ವೆಚ್ಚಗಳನ್ನು / ವೇತನ ವೆಚ್ಚಗಳನ್ನು ತಗ್ಗಿಸದಿರುವ ವಿಶ್ವವಿದ್ಯಾಲಯಗಳಿಗೆ ಪಿಂಚಣಿ ಅನುದಾನವನ್ನು ಕಡಿಮೆ ಮಾಡಲಾಗುವುದು.

ಹಣಕಾಸು ಅಧಿಕಾರಿಗಳು ಮಾತನಾಡಿ ಪ್ರಸ್ತುತ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲ ಸುಮಾರು 38 ಕೋಟಿಗಳಷ್ಟಿದ್ದು ಈ ಮೊತ್ತದಲ್ಲಿ ಅಂದಾಜು 12 ಕೋಟಿ ಅತಿಥಿ ಉಪನ್ಯಾಸಕರ ಸಂಭಾವನೆ ಹಾಗೂ ಸುಮಾರು 11 ಕೋಟಿ ಹೊರಗುತ್ತಿಗೆ ನೌಕರರ ವೇತನ ಅಂದಾಜು 15 ಕೋಟಿಗಳಷ್ಟು ಪರೀಕ್ಷಾ ವೆಚ್ಚ ವಿದ್ಯಾರ್ಥಿ ಬೆಂಬಲ ಸೇವೆ ಹಾಗೂ ಆಡಳಿತಾತ್ಮಕ ವೆಚ್ಚಗಳಿಗೆ ಸುಮಾರು 5 ಕೋಟಿ ವೆಚ್ಚವಾಗುತ್ತಿದ್ದು ಪಿಂಚಣಿ ಬೇಡಿಕೆಗನುಸಾರವಾಗಿ ಆಂತರಿಕ ಸಂಪನ್ಮೂಲದಲ್ಲಿ ಪ್ರತ್ಯೇಕವಾಗಿ ಠೇವಣಿ ಇಡಲು ಸಾಧ್ಯವಾಗದಿರುವುದನ್ನು ಸಭೆಯ ಗಮನಕ್ಕೆ ತಂದರು ಹಾಗೂ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಸಿಬ್ಬಂದಿಗಳನ್ನು ನೇಮಿಸಿಕೊಂಡಿರುವುದನ್ನು ಕಡಿತಗೊಳಿಸುವುದರಿಂದ ಉಳಿಯುವ ಮೊತ್ತವನ್ನು ಪಿಂಚಣಿ ನಿಧಿಗೆ ಬಳಸಬಹುದಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

ನಿರ್ಣಯ: ಚರ್ಚೆಯ ನಂತರ ಮೇಲಿನ ಕ್ರಮ ಸಂಖ್ಯೆ 1 ರ ಕುರಿತು ಇದೇ ಸಭೆಯಲ್ಲಿ ಪ್ರತ್ಯೇಕ ಕಾರ್ಯಸೂಚಿ ಮಂಡಿಸಿರುವುದರಿಂದ ಅಲ್ಲಿ ನಿರ್ಣಯ ಕೈಗೊಳ್ಳಲು ಹಾಗೂ ಉಳಿದ ಎರಡು ವಿಷಯಗಳ ಕುರಿತು ಪರಿಶೀಲಿಸಿ ಅಗತ್ಯ ಕ್ರಮವಹಿಸಲು ನಿರ್ಣಯಿಸಲಾಯಿತು.

### ಮಾನವ ಸಂಪನ್ಮೂಲ ನಿರ್ವಹಣೆ ವಿಭಾಗ

**2026–ಸಿಂ–.4.12:** ಕು: ಅನುಷಾ ಎಸ್.ಕೆ. ಇವರನ್ನು UUCMS Portal Admin ಆಗಿ ಕಾರ್ಯ ನಿರ್ವಹಿಸಲು ಸಂಭಾವನೆ ನಿಗದಿಪಡಿಸಿರುವ ಕುರಿತು.

ಚರ್ಚೆ: ಹಣಕಾಸು ಅಧಿಕಾರಿಗಳು ವಿಷಯ ಮಂಡಿಸಿ ಮಾತನಾಡಿ UUCMS Portal Admin ಎಂಬ ಹುದ್ದೆಯು ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಹುದ್ದೆಯಾಗಿರುವುದಿಲ್ಲ. ಸದರಿ ಹುದ್ದೆಯನ್ನು ಯಾವ ಆಧಾರದ ಮೇಲೆ ನೇಮಕ ಮಾಡಿಕೊಂಡು ವೇತನ ನಿಗದಿಪಡಿಸಲಾಗಿದೆ ಎಂದು ಆಡಿಟ್ ಆಕ್ಷೇಪಣೆ ಆಗಿರುತ್ತದೆ, ಪ್ರಾರಂಭದಲ್ಲಿ ಕುಮಾರಿ ಅನುಷಾ ಎಸ್.ಕೆ. ಇವರಿಗೆ UUCMS Portal Admin ಎಂದು ನೇಮಕ ಮಾಡಿ ರೂ.22000–00 ವೇತನ ನಿಗದಿಪಡಿಸಲಾಗಿದೆ, ನಂತರ ರೂ. 26000–00 ಗಳಿಗೆ ಹೆಚ್ಚಿಸಲಾಗಿದೆ, ನಂತರ ಆರೇ ತಿಂಗಳಿಗೆ ರೂ.32000–00 ಗಳಿಗೆ ಹೆಚ್ಚಿಸಲಾಗಿದೆ ಎಂದು ಹೇಳಿದರು.

ಮಾನ್ಯ ಕುಲಪತಿಗಳು UUCMS Portal ಗೆ ತಂತ್ರಜ್ಞಾನ ಅರಿತಿರುವ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ, ಆದ್ದರಿಂದ ಕು. ಅನುಷಾ ಎಸ್.ಕೆ. ಇವರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಕು.ಅನುಷಾ ಎಸ್.ಕೆ. ಇವರನ್ನು ವಿಶ್ವವಿದ್ಯಾಲಯದಲ್ಲಿ ರೂ.23000–00ಗಳ (ರೂಪಾಯಿ ಇಪ್ಪತ್ಮೂರು ಸಾವಿರ ಮಾತ್ರ) ವೇತನದೊಂದಿಗೆ ಕಾರ್ಮಿಕ ಇಲಾಖೆಯ ಮಾರ್ಗಸೂಚಿಯನ್ವಯ ಹೊರಗುತ್ತಿಗೆಯ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ನಿರ್ಣಯಿಸಲಾಯಿತು.

### ಪರೀಕ್ಷಾ ವಿಭಾಗ

**2026–ಸಿಂ–4.13:** ದಿನಾಂಕ:13–02–2026 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

ನಿರ್ಣಯ: ದಿನಾಂಕ:13–02–2026 ರಂದು ನಡೆದ ವಿದ್ಯಾರ್ಥಿಗಳ ಪರೀಕ್ಷಾ ಅಕ್ರಮ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.

**2026–ಸಿಂ–4.13(ಎ):** ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಸಂಬಂಧಿಸಿದ ವಿವಿಧ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಸಂಬಂಧಿಸಿದ ವಿವಿಧ ಶುಲ್ಕಗಳನ್ನು ಪರಿಷ್ಕರಿಸಲು ಸಭೆಯು ಅನಮೋದನೆ ನೀಡಿತು.

**2026–ಸಿಂ–4.13(ಬಿ):** 35ನೇ ಘಟಿಕೋತ್ಸವ ಸಮಾರಂಭದಲ್ಲಿ ಪ್ರಧಾನ ಮಾಡುವ "ಸ್ವರ್ಣಪದಕ"ಗಳನ್ನು ಖರೀದಿಸಲು ದರ ಒಪ್ಪಂದದ ಕರಾರು ಒಪ್ಪಂದದ ಸ್ಥಿರಿಕರಣ ಕುರಿತು.

ನಿರ್ಣಯ: ಚರ್ಚೆಯ ನಂತರ 35ನೇ ಘಟಿಕೋತ್ಸವ ಸಮಾರಂಭದಲ್ಲಿ ಪ್ರಧಾನ ಮಾಡುವ "ಸ್ವರ್ಣಪದಕ"ಗಳನ್ನು ಖರೀದಿಸಲು ಮಾಡಿಕೊಂಡ ದರ ಒಪ್ಪಂದದ ಕರಾರನ್ನು ಸಭೆಯು ಸ್ಥಿರೀಕರಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

## ಪ್ರಾಧಿಕಾರ ವಿಭಾಗ

**2026–ಸಿಂ–4.14:** ದಿನಾಂಕ:05–05–2026 ರಂದು ನಡೆದಿರುವ ಸಿಂಡಿಕೇಟ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ದೃಢೀಕರಣ ಕುರಿತು.

**ನಿರ್ಣಯ:** ದಿನಾಂಕ:05–05–2026 ರಂದು ನಡೆದಿರುವ ಸಿಂಡಿಕೇಟ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು.

**2026–ಸಿಂ–4.15:** ದಿನಾಂಕ:05–05–2026 ರಂದು ನಡೆದಿರುವ ಸಿಂಡಿಕೇಟ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ದಿನಾಂಕ:05–05–2026 ರಂದು ನಡೆದಿರುವ ಸಿಂಡಿಕೇಟ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ಸಭೆಯು ಅನುಮೋದಿಸಿತು.

## ಮಾನವ ಸಂಪನ್ಮೂಲ ನಿರ್ವಹಣೆ ವಿಭಾಗ

**2026–ಸಿಂ–4.16:** ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಕನಿಷ್ಠ ವೇತನ ದರಗಳಂತೆ 'ಸಿ' ಮತ್ತು 'ಡಿ' ಹಾಗೂ ಇತರೆ ದರ್ಜೆಯ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆದಿರುವ ಬಗ್ಗೆ.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಕನಿಷ್ಠ ವೇತನ ದರಗಳಂತೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳ ಸೇವೆಯನ್ನು ಪಡೆಯಲಾಗುತ್ತಿದ್ದು ಇದರಲ್ಲಿ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ನೇಮಕ ಮಾಡಿಕೊಂಡಿರುವುದರಿಂದ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗಿರುವುದಲ್ಲದೇ ಅವರುಗಳಿಗೆ ಕಾಲಕಾಲಕ್ಕೆ ವೇತನವನ್ನೂ ಸಹ ನೀಡಲು ಆಗುತ್ತಿಲ್ಲವೆಂದರು ಹಾಗೂ ಪ್ರಸ್ತುತ ಸಾಲಿನಲ್ಲಿ ಕರೆದಿರುವ ಟೆಂಡರ್ ನಲ್ಲಿ ಪ್ರಕಟಿಸಲಾಗಿರುವ ಹುದ್ದೆಗಳಿಗೂ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆಗೂ ವ್ಯತ್ಯಾಸವಿದ್ದು ಹೆಚ್ಚುವರಿಯಾಗಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿರುವುದನ್ನು ಈ ಕೆಳಕಂಡಂತೆ ವಿವರಿಸಿದರು.

| ಕ್ರಮ ಸಂಖ್ಯೆ | ವೃಂದ | ಟೆಂಡರ್‌ನಲ್ಲಿ ಪ್ರಕಟಿಸಲಾದ ಹುದ್ದೆಗಳ ಸಂಖ್ಯೆ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | ಹೆಚ್ಚುವರಿ |
|---|---|---|---|---|
| 1 | Aaya | 1 | 1 | 0 |
| 2 | Assistant Cook | 3 | 4 | 1 |
| 3 | Assistant Librarian | 0 | 1 | 1 |
| 4 | Attender | 110 | 107 | 3 |
| 5 | Chief Cook | 1 | 1 | 0 |
| 6 | Computer Operator / Data Entry Operator (Skilled) | 30 | 46 | 16 |
| 7 | Computer Technician | 2 | 2 | 0 |
| 8 | Driver | 1 | 1 | 0 |
| 9 | Electrician | 3 | 3 | 0 |
| 10 | Generator Operator | 2 | 2 | 0 |
| 11 | Lab-Assistant | 5 | 2 | 0 |
| 12 | Lab-Technician | 4 | 2 | 0 |
| 13 | Library Assistant | 8 | 13 | 5 |
| 14 | Medical Lab Assistant | 1 | 1 | 0 |
| 15 | Network Assistant | 1 | 1 | 0 |
| 16 | Nurse | 2 | 1 | 0 |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ

| | | | | |
|---|---|---|---|---|
| 17 | PCW / Helper | 9 | 21 | 12 |
| 18 | Pharmacist | 1 | 1 | 0 |
| 19 | Plumber | 2 | 2 | 0 |
| 20 | Production Assistant | 2 | 2 | 0 |
| 21 | Room boy | 1 | 1 | 0 |
| 22 | Steno | 1 | 1 | 0 |
| | **Total** | **190** | **216** | **38** |

| ಕ್ರಮ ಸಂಖ್ಯೆ | ವೃಂದ | ಟೆಂಡರ್‌ನಲ್ಲಿ ಪ್ರಕಟಿಸಲಾದ ಹುದ್ದೆಗಳ ಸಂಖ್ಯೆ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ | ಹೆಚ್ಚುವರಿ |
|---|---|---|---|---|
| 1 | Security Superwiser | 4 | 5 | 1 |
| 2 | Security Guard | 49 | 63 | 14 |
| 3 | Sweepers /Assistant | 50 | 24 | 0 |
| 4 | Gardener | 17 | 72 | 55 |
| 5 | Gangman | 4 | 4 | 0 |
| | **Total** | **124** | **168** | **70** |

ಮುಂದುವರೆದು ಕುಲಸಚಿವರು ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಹೆಚ್ಚುವರಿಯಾಗಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿದ್ದು ಹಾಗೂ Security Superwiser Security Guard, Gardener, Sweepers /Assistant ಹುದ್ದೆಗಳು ವಿಶ್ವವಿದ್ಯಾಲಯಕ್ಕೆ ಮಂಜೂರಾಗದೇ ಇದ್ದರೂ ಕೂಡ ಈ ಹುದ್ದೆಗಳಿಗೆ ಎದುರಾಗಿ ಸಿಬ್ಬಂದಿಗಳನ್ನು ನೇಮಕ ಮಾಡಿರುವುದನ್ನು ಸಭೆಯ ಗಮನಕ್ಕೆ ತಂದರು. ಈ ಕೆಳಕಂಡಂತೆ ಅಂಕಿ ಅಂಶಗಳನ್ನು ಸಭೆಗೆ ನೀಡಿದರು.

| ಕ್ರ ಸಂ | ವೃಂದ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು | ಕರ್ತವ್ಯ ನಿರ್ವಹಿಸುತ್ತಿರುವ ಏಜೆನ್ಸಿ ನೌಕರರ ಹುದ್ದೆಗಳು |
|---|---|---|---|---|---|
| 1 | Junior Assistant | 158 | 84 | 74 | 46 (Computer oper |
| 2 | Lab Assistant | 14 | 1 | 13 | 2 |
| 3 | Library Assistant | 5 | 3 | 2 | 14 |
| 4 | Driver | 9 | 3 | 6 | 1 |
| 5 | Electrician | 2 | 1 | 1 | 3 |
| 6 | Lab Technician | 8 | 1 | 7 | 2 |
| 7 | Attender | 69 | 16 | 53 | 107 |
| 8 | PCW / Helper | 147 | 7 | 140 | 21 |
| 9 | Plumber | 1 | 0 | 1 | 2 |
| 10 | Assistant Cook | 1 | 1 | 0 | 4 |
| 11 | Generator Operator | - | - | - | 2 |
| 12 | Chief Cook | - | - | - | 1 |
| 13 | Computer Technician | - | - | - | 2 |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

| | | | | | |
|---|---|---|---|---|---|
| 14 | Medical Lab Technician | - | - | - | 1 |
| 15 | Nurse | - | - | - | 1 |
| 16 | Pharmacist | - | - | - | 1 |
| 17 | Steno | - | - | - | 1 |
| 18 | Site Engineer | - | - | - | 0 |
| 19 | Production Assistant | - | - | - | 2 |
| 20 | Network Assistant | - | - | - | 1 |
| 21 | Aaya | - | - | - | 1 |
| 22 | Room Boy | - | - | - | 1 |
| 23 | Security Superwiser | - | - | - | 5 |
| 24 | Security Guard | - | - | - | 63 |
| 25 | Gardener | - | - | - | 72 |
| 26 | Sweepers /Assistant | - | - | - | 24 |
| 27 | Gangman | - | - | - | 4 |
| **Total** | | **414** | **127** | **287** | **384** |

ಪ್ರಸ್ತುತ ಟೆಂಡರ್ ನಲ್ಲಿ ನಮೂದಿಸಿರುವ ಒಟ್ಟು ಹುದ್ದೆಗಳ ಸಂಖ್ಯೆಗೆ ಎದುರಾಗಿ ಹೆಚ್ಚುವರಿಯಾಗಿ 98 ಸಿಬ್ಬಂದಿಗಳನ್ನು ನೇಮಕ ಮಾಡಿರುವುದನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು ಹಾಗೂ ಹೆಚ್ಚುವರಿ ಹುದ್ದೆಗಳನ್ನು ನೇಮಿಸಿರುವುದರಿಂದ ವಿಶ್ವವಿದ್ಯಾಲಯಕ್ಕೆ ಆರ್ಥಿಕವಾಗಿ ಹೊರೆಯಾಗಿದ್ದು ವೇತನ ಪಾವತಿ ವಿಳಂಬವಾಗುತ್ತಿರುವುದನ್ನು ಸಭೆಯ ಗಮನಕ್ಕೆ ತಂದು ವಿವರಗಳನ್ನು ಕೆಳಕಂಡಂತೆ ಮಂಡಿಸಿದರು.

| | ಟೆಂಡರ್‌ನಲ್ಲಿ ನಮೂದಿಸಿರುವ ಒಟ್ಟು ಹುದ್ದೆಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಏಜೆನ್ಸಿ ನೌಕರರುಗಳ ಸಂಖ್ಯೆ | ಹೆಚ್ಚುವರಿ |
|---|---|---|---|
| ಸಿ & ಡಿ ಗ್ರೂಪ್ | 190 | 216 | 38 |
| ಭದ್ರತಾ, ಸ್ವಚ್ಛತ ತೋಟಗಾರಿಕೆ ಮತ್ತು /ಗ್ಯಾಂಗ್‌ಮನ್ | 124 | 168 | 70 |
| **ಒಟ್ಟು** | **314** | **386** | **98** |

ಮುಂದುವರೆದು ಹಣಕಾಸು ಅಧಿಕಾರಿಗಳು ಮಾತನಾಡಿ ಪ್ರಸ್ತುತ ಹೊರಗುತ್ತಿಗೆ ನೌಕರರಿಗೆ ವೇತನ ಪಾವತಿಸಲು ವಿಶ್ವವಿದ್ಯಾಲಯವು ವಾರ್ಷಿಕ ರೂ.11.00 ಕೋಟಿಗಳನ್ನು ಮೀಸಲಿಡಬೇಕಾಗಿದ್ದು ಪ್ರಸ್ತುತ ಆರ್ಥಿಕ ಪರಿಸ್ಥಿತಿಯಲ್ಲಿ ಕಷ್ಟಸಾಧ್ಯವಾಗಿರುತ್ತದೆ ಹಾಗೂ ಹೆಚ್ಚುವರಿಯಾಗಿ ನೇಮಿಸಿಕೊಂಡಿರುವ 98 ನೌಕರರಿಗೆ ವಾರ್ಷಿಕ ಅಂದಾಜು 3.00 ಕೋಟಿಗಳಷ್ಟು ವೇತನ ಪಾವತಿಸುತ್ತಿದ್ದು ವಿಶ್ವವಿದ್ಯಾಲಯಕ್ಕೆ ಆರ್ಥಿಕವಾಗಿ ಹೊರೆಯಾಗಿರುವುದನ್ನು ಸಭೆಯ ಗಮನಕ್ಕೆ ತಂದರು ಹಾಗೂ ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಆರ್ಥಿಕ ಶಿಸ್ತು ಕಾಪಾಡದಿದ್ದಲ್ಲಿ ಮುಂದಿನ ದಿನಗಳಲ್ಲಿ ಪಿಂಚಣಿ ಪಾವತಿಯು ಕಷ್ಟಸಾಧ್ಯವಾಗುವುದೆಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ



Scanned with OKEN Scanner

ಸದಸ್ಯರಾದ ಶ್ರೀ ಮುಸಾವೀರ್ ಭಾಷಾರವರು ಮಾತನಾಡಿ ಹಲವಾರು ವರ್ಷಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಸ್ಥಗಿತಗೊಳಿಸಿದಲ್ಲಿ ಅವರ ದೈನಂದಿನ ಬದುಕಿಗೆ ತೊಂದರೆಯಾಗುವುದರಿಂದ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಸ್ಥಗಿತಗೊಳಿಸುವಲ್ಲಿ ತಮ್ಮ ಬಲವಾದ ಆಕ್ಷೇಪಣೆ ಹಾಗೂ ವಿರೋಧವಿದ್ದು ಇದಕ್ಕೆ ನನ್ನ ಸಮ್ಮತಿ ಇರುವುದಿಲ್ಲ ಎಂದರು.

ಸದಸ್ಯರಾದ ಶ್ರೀ ಶಿವಕುಮಾರ್ ಎಂ. ಇವರು ಮಾತನಾಡಿ ಹುದ್ದೆ ಕಡಿತ ಮಾಡುವುದಾದರೆ ಕೆಲವು ಮಾನದಂಡಗಳನ್ನು ಅನುಸರಿಸಿ ಕ್ರಮವಹಿಸಬೇಕೆಂದರು.

ಸದಸ್ಯರಾದ ಶ್ರೀ ಶ್ರೀಪಾಲ್‌ರವರು ಮಾತನಾಡುತ್ತಾ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಹೆಚ್ಚುವರಿ ಹುದ್ದೆಗಳನ್ನು ಕಡಿತ ಮಾಡುವುದು ಸೂಕ್ತವೆಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಕನಿಷ್ಠ ವೇತನ ದರಗಳಂತೆ 'ಸಿ' ಮತ್ತು 'ಡಿ' ಹಾಗೂ ಇತರೆ ದರ್ಜೆಯ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆದಿರುವ ಬಗ್ಗೆ ವಿಶ್ವವಿದ್ಯಾಲಯದಲ್ಲಿ ಮಂಜೂರಾಗಿರುವ ಹುದ್ದೆಗೆದುರಾಗಿ ಪರಿಗಣಿಸುವ ಕುರಿತ ಸಾದಕ-ಭಾದಕಗಳನ್ನು ಪರಿಶೀಲಿಸಿ ಹುದ್ದೆ ಕಡಿತದ ಬಗ್ಗೆ ನಿರ್ಧಾರ ಕೈಗೊಳ್ಳಬಹುದೆಂದು ನಿರ್ಣಯಿಸಲಾಯಿತು.

**2026-ಸಿಂ-4.17:** ಶಾಲಾ ಪರಿಕಲ್ಪನೆಯ ಶಾಲೆಗಳಿಗೆ ನಿರ್ದೇಶಕರನ್ನು ನೇಮಿಸುವ ಬಗ್ಗೆ.

ನಿರ್ಣಯ: ಚರ್ಚೆಯ ನಂತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ಸಿ.ಬಿ.ಸಿ.ಎಸ್. ರೆಗ್ಯುಲೇಶನ್ ಪ್ರಕಾರ ಅವಧಿ ಮುಗಿದಿರುವ School of Earth Resources and Environmental Sciences, School of Bio-Sciences ಮತ್ತು School of Education ಶಾಲೆಗಳಿಗೆ ಶಾಲಾ ನಿರ್ದೇಶಕರ ಸ್ಥಾನಕ್ಕೆ ಹೊಸ ನಿರ್ದೇಶಕರನ್ನು ಸರದಿ ಹಾಗೂ ಜೇಷ್ಠತೆ ಆಧಾರದಲ್ಲಿ ನಿಯಮಾನುಸಾರ ನೇಮಕ ಮಾಡಲು ಅನುಮೋದಿಸಲಾಯಿತು.

**2026-ಸಿಂ-4.18:** ಉಪಕುಲಸಚಿವ ಹುದ್ದೆಯ ಬಡ್ತಿಯ ಕುರಿತು.

ಚರ್ಚೆ: ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಖಾಲಿ ಇದ್ದ ಉಪಕುಲಸಚಿವ ಹುದ್ದೆಯನ್ನು ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ದ ಪ್ರಕರಣ 57ರನ್ವಯ ನೇಮಕಾತಿ ಮಂಡಳಿಯನ್ನು ರಚಿಸಿ ಅದರಂತೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿಯು ದಿನಾಂಕ:26-09-2025 ರಂದು ಸಂದರ್ಶನ ನಡೆಸಿ 08 ಸಹಾಯಕ ಕುಲಸಚಿವರುಗಳಿಗೆ ಉಪಕುಲಸಚಿವರಾಗಿ ಬಡ್ತಿ ನೀಡಿ ದಿನಾಂಕ:26-09-2025 ರಂದು ಆದೇಶ ಹೊರಡಿಸಿರುವುದನ್ನು ದಿನಾಂಕ:10-10-2025 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಹಾಗೂ ದಿನಾಂಕ;26-09-2025 ರಂದು ನಡೆದ ಆಯ್ಕೆ ಸಮಿತಿ ಸಭೆಯು ಈ ಕೆಳಕಂಡವರನ್ನು ಕಾಯ್ದಿರಿಸಿದ ಪಟ್ಟಿಯಲ್ಲಿರಿಸಿ, ವಯೋನಿವೃತ್ತಿಯಿಂದಾಗಿ ತೆರವಾಗುವ ಸ್ಥಾನಗಳಿಗೆ ಕ್ರಮವಾಗಿ ಜೇಷ್ಟತೆ ಆಧಾರದ ಮೇಲೆ ಉಪಕುಲಸಚಿವ ಹುದ್ದೆಯ ಬಡ್ತಿಗೆ ಪರಿಗಣಿಸಲು ತೀರ್ಮಾನಿಸಲಾಗಿದೆ.

ಕಾಯ್ದಿರಿಸಿದ ಪಟ್ಟಿಯಲ್ಲಿರಿಸಿದ ಸಹಾಯಕ ಕುಲಸಚಿವರುಗಳ ವಿವರ.

1. ಶ್ರೀಮತಿ ಸುಶೀಲ.ಕೆ
2. ಶ್ರೀ ಕೃಷ್ಣಮೂರ್ತಿ.ಜಿ.ಎಸ್.
3. ಶ್ರೀ. ನಾಗರಾಜ.ಟಿ

ಮೇಲೆ ಕಾಯ್ದಿರಿಸಿದ ಪಟ್ಟಿಯಲ್ಲಿರುವವರಲ್ಲಿ ಕ್ರಮ ಸಂಖ್ಯೆ 01 ರ ಶ್ರೀಮತಿ ಸುಶೀಲ.ಕೆ ಇವರಿಗೆ ಈಗಾಗಲೇ ಉಪಕುಲಸಚಿವರೊಬ್ಬರ ವಯೋನಿವೃತಿಯಿಂದಾಗಿ ತೆರವಾದ ಸ್ಥಾನಕ್ಕೆ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

ಪರಿಗಣಿಸಿ ಬಡ್ತಿಯನ್ನು ನೀಡಲಾಗಿದೆ. ಕಾಯ್ದಿರಿಸಿದ ಪಟ್ಟಿಯಲ್ಲಿರುವ ಉಳಿದ ಇಬ್ಬರು ಸಹಾಯಕ ಕುಲಸಚಿವರುಗಳು ತಮಗೆ ಉಪಕುಲಸಚಿವರ ವಯೋನಿವೃತ್ತಿಯಿಂದಾಗಿ ತೆರವಾಗುವ ಸ್ಥಾನಗಳಿಗೆ ಪರಿಗಣಿಸಿ ಬಡ್ತಿ ನೀಡುವಂತೆ ಕೋರಿರುತ್ತಾರೆ. ಈ ಬಗ್ಗೆ ದಾಖಲೆ ಮತ್ತು ನಿಯಮಗಳನ್ನು ಪರಿಶೀಲಿಸಲಾಗಿ ಪರಿನಿಯಮದ ಪ್ರಕಾರ ಉಪಕುಲಸಚಿವ ಹುದ್ದೆಯ ಬಡ್ತಿಗೆ ಸಹಾಯಕ ಕುಲಸಚಿವ ಹುದ್ದೆಯಲ್ಲಿ ಕನಿಷ್ಟ 02 ವರ್ಷಗಳ ಸೇವೆ ಸಲ್ಲಿಸಿರಬೇಕೆಂದು ತಿಳಿಸಲಾಗಿದೆ. ಆದರೆ ಮೇಲೆ ಹೆಸರಿಸಲಾದ ಮೂರೂ ಜನ ಸಹಾಯಕ ಕುಲಸಚಿವರುಗಳು ಸಂದರ್ಶನದ ದಿನಾಂಕದಂದು ನಿಗದಿತ ಕನಿಷ್ಟ 02 ವರ್ಷಗಳ ಸೇವಾ ಅನುಭವವನ್ನು ಪೂರೈಸದೇ ಇರುವುದು ಕಂಡು ಬಂದಿರುತ್ತದೆ. ಹಾಗೂ ಇವರುಗಳಿಗೆ ಸ್ವತಂತ್ರ ಪ್ರಭಾರಕ್ಕೆ ನೀಡಿದ ಅವಧಿಯನ್ನೂ ಸಹ ಸೇವೆಗೆ ಪರಿಗಣಿಸಿ ಸಂದರ್ಶನ ನೀಡಿರುವುದು ಕಂಡುಬಂದಿರುತ್ತದೆ. ಅಲ್ಲದೇ ಕ್ರಮ. ಸಂಖ್ಯೆ 02ರ ಶ್ರೀ.ಕೃಷ್ಣಮೂರ್ತಿ.ಜಿ.ಎಸ್ ಇವರಿಗೆ ಈ ಹಿಂದೆ ಇಲಾಖಾ ವಿಚಾರಣೆ ನಡೆಸಿ ನೀಡಿರುವ ದಂಡನಾ ಅವಧಿಯು ಪೂರ್ಣಗೊಳ್ಳುವ ಮುನ್ನವೇ ಸಹಾಯಕ ಕುಲಸಚಿವ ಹುದ್ದೆಗೆ ಬಡ್ತಿ ನೀಡಿರುವುದೂ ಸಹ ಕಂಡುಬಂದಿರುತ್ತದೆ. ಆದುದರಿಂದ ಈ ಎಲ್ಲಾ ಕಾರಣಗಳಿಂದ ಈಗಾಗಲೇ ಉಪಕುಲಸಚಿವರಾಗಿ ಬಡ್ತಿ ಹೊಂದಿರುವ ಶ್ರೀಮತಿ ಸುಶೀಲ.ಕೆ ಇವರ ಬಡ್ತಿ ಮತ್ತು ಶ್ರೀ ಕೃಷ್ಣಮೂರ್ತಿ ಜಿ.ಎಸ್. ಇವರ ಸಹಾಯಕ ಕುಲಸಚಿವ ಹುದ್ದೆಯ ಬಡ್ತಿಯ ಕ್ರಮ / ದಿನಾಂಕಗಳನ್ನು ಮರು ಪರಿಶೀಲಿಸಬೇಕಾಗಿರುತ್ತದೆ ಎಂದರು.

ಕುಲಪತಿಯವರು ಮಾತನಾಡುತ್ತಾ, ಒಂದು ಹುದ್ದೆಗೆ Additional Charge ನೀಡಿದಾಗ ಆ ಹುದ್ದೆಯ ಅನುಭವ ಹೊಂದಿರುತ್ತಾರೆ ಎಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಈ ರೀತಿಯಾಗಿ ಹೆಚ್ಚುವರಿ ಪ್ರಭಾರ ನೀಡುವುದು ತಾತ್ಕಾಲಿಕ ವ್ಯವಸ್ಥೆಯಾಗಿದ್ದು ಇದನ್ನು ಖಾಯಂ ಅನುಭವ ಎಂದು ಪರಿಗಣಿಸಲು ಅವಕಾಶವಿರುವುದಿಲ್ಲವೆಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಕೆಳಕಂಡಂತೆ ನಿರ್ಣಯಿಸಲಾಯಿತು.

1. ಈಗಾಲೇ ಉಪಕುಲಸಚಿವರಾಗಿ ಬಡ್ತಿ ನೀಡಿರುವ ಶ್ರೀಮತಿ ಸುಶೀಲ ಕೆ. ಇವರಿಗೆ ಒಂದು ನೋಟೀಸ್ ನೀಡಿ ಅವರಿಂದ ಸ್ಪಷ್ಟೀಕರಣ ಪಡೆದು ನಂತರ ಮುಂದಿನ ಕ್ರಮಕೈಗೊಳ್ಳುವುದು.
2. ಶ್ರೀ. ಜಿ.ಎಸ್. ಕೃಷ್ಣಮೂರ್ತಿ ಇವರು ಅವರಿಗೆ ವಿಧಿಸಿದ ದಂಡನೆಯ ಕುರಿತು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ಪ್ರಕರಣದ ತೀರ್ಪು ಪ್ರಕಟವಾದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.
3. ಶ್ರೀ. ಟಿ. ನಾಗರಾಜ ಇವರ ಬಡ್ತಿಗೆ ಸಂಬಂಧಿಸಿದಂತೆ ಸಹಾಯಕ ಕುಲಸಚಿವ ಹುದ್ದೆಗೆ ಇರಬೇಕಾದ ಕನಿಷ್ಠ ಅರ್ಹತಾ ಸೇವೆಯ ಕುರಿತು ಮರು ಪರಿಶೀಲಿಸಿ ಕನಿಷ್ಠ ಅರ್ಹತಾ ಸೇವೆ ಮುಗಿದ ನಂತರ ಪದೋನ್ನತಿಗೆ ಪರಿಗಣಿಸಲು ನಿರ್ಣಯಿಸಲಾಯಿತು.

**2026–ಸಿಂ–4.19:** ಡಾ. ರಾಜ ನಾಯಕ, ಹಿರಿಯ ಪ್ರಾಧ್ಯಾಪಕರು ಇವರಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವ ಬಗ್ಗೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿದರು. ಡಾ. ರಾಜಾನಾಯಕ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ – ಇವರು "Review on Recent Advances in Phytochemistry and Pharmacology of Wild Mushrooms and Medicinal Plants" ಎಂಬ ವಿಷಯದ ಕುರಿತು ಗ್ರಂಥವನ್ನು ಹೊರತರಲು ಉದ್ದೇಶಿಸಿರುವುದರಿಂದ ಏಪ್ರಿಲ್/ಮೇ–2026 ರಿಂದ ಒಂದು ವರ್ಷದ ಅವಧಿಗೆ ಸಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಸದರಿಯವರ ಸೇವಾ ಮಾಹಿತಿಯು ಈ ಕೆಳಕಂಡಂತಿದೆ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ



Scanned with OKEN Scanner

1) ಡಾ.ರಾಜನಾಯಕ, ಹಿರಿಯ ಪ್ರಾಧ್ಯಾಪಕರು – ಇವರು ದಿನಾಂಕ:03-08-1996 ರಂದು ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಉಪನ್ಯಾಸಕರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಈವರೆಗೆ 29 ವರ್ಷಗಳ ಸೇವೆಯನ್ನು ಸಲ್ಲಿಸಿದ್ದು, ಪರಿನಿಯಮಗಳನ್ವಯ ಅರ್ಹತೆ ಹೊಂದಿರುತ್ತಾರೆ.

2) ಪೂರಕ ಮಾರ್ಗದರ್ಶಿ ಸೂತ್ರಗಳ 2ನೇ ಸೂತ್ರದನ್ವಯ ಸದರಿ ಅಧ್ಯಾಪಕರ ಪ್ರಸ್ತಾವನೆಯನ್ನು ವಿಭಾಗೀಯ ಪರಿಷತ್ತಿಗೆ ಸಲ್ಲಿಸಿ, ಸೂಕ್ತ ಶಿಫಾರಸ್ಸಿನೊಂದಿಗೆ ಸಲ್ಲಿಸಿರುತ್ತಾರೆ.

3) ಪೂರಕ ಮಾರ್ಗದರ್ಶಿ ಸೂತ್ರಗಳ 4ನೇ ಸೂತ್ರದನ್ವಯ ಸದರಿ ಅಧ್ಯಾಪಕರು ದಿನಾಂಕ: 30-04-2030ಕ್ಕೆ ವಯೋ ನಿವೃತ್ತಿ ಹೊಂದುತ್ತಿದ್ದು, ಸಬ್ಬಾಟಿಕಲ್ ರಜೆಯಿಂದ ತೆರಳಿದ ನಂತರ ಕನಿಷ್ಠ 03 ವರ್ಷಗಳ ಸೇವೆಯ ಬಾಕಿ ಇರಬೇಕೆಂದು ತಿಳಿಸಲಾಗಿದೆ. ಆದರೆ, ಸದರಿ ಪ್ರಾಧ್ಯಾಪಕರಿಗೆ 2 ವರ್ಷ 10 ತಿಂಗಳುಗಳ ಸೇವೆ ಮಾತ್ರ ಉಳಿಯುತ್ತದೆ. ಎಂದು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಚರ್ಚೆಯ ನಂತರ ನಿಯಮಾನುಸಾರ 10 ತಿಂಗಳ ಸೆಬ್ಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಹಾಗೂ ಸೆಬ್ಬಾಟಿಕಲ್ ರಜೆ ಮುಗಿದು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಂದರ್ಭದಲ್ಲಿ ತಾವು ಬರೆದ ಗ್ರಂಥವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂಬ ಷರತ್ತನ್ನು ವಿಧಿಸಲು ನಿರ್ಣಯಿಸಲಾಯಿತು.

**2026–ಸಿಂ–4.20:** ಶ್ರೀಮತಿ ಮಂಜುಳ ಎಸ್. – ಇವರಿಗೆ ವೇತನ ನಿಗದೀಕರಣ ಮಾಡುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡಿ, ಶ್ರೀಮತಿ. ಮಂಜುಳ ಎಸ್. ಇವರಿಗೆ ದಿನಾಂಕ: 04-04-2026 ರಂದು ಹಿರಿಯ ಸಹಾಯಕ ಹುದ್ದೆಯಿಂದ ಶಾಖಾಧಿಕಾರಿ ಹುದ್ದೆಗೆ ಬಡ್ತಿ ನೀಡಲಾಗಿದೆ. ಸದರಿಯವರಿಗೆ ಶಾಖಾಧಿಕಾರಿ ಹುದ್ದೆಯ ವೇತನ ನಿಗದೀಕರಣ ಮಾಡಬೇಕಾಗಿದ್ದು ಈ ಕುರಿತು ಸದರಿಯವರ ಕಡತ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ- ಇವರು ಈ ಹಿಂದೆ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಪ್ರವೇಶಾತಿಗೆ ಸಂಬಂಧಪಟ್ಟಂತೆ ಇಬ್ಬರು ವಿದ್ಯಾರ್ಥಿಗಳಿಂದ ಪಡೆದ ಹಣದ ಪಾವತಿಯನ್ನು ದಾಖಲಿಸದೆ ಆ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ದಿನಾಂಕ:03-03-2007 ರಂದು ಕಾರಣಕೇಳಿ ನೋಟೀಸ್ ಜಾರಿ ಮಾಡಲಾಗಿತ್ತು. ಸದರಿ ನೋಟೀಸ್‌ಗೆ ದಿನಾಂಕ:12-03-2007 ರಂದು ಉತ್ತರಿಸಿರುತ್ತಾರೆ.

ವಿಶ್ವವಿದ್ಯಾಲಯದ ಪತ್ರ ಸಂಖ್ಯೆ:ಕುವಿ:ಮಾಸನಿ-2:7186:07-08 ದಿನಾಂಕ:26-09-2007ರ ಪತ್ರದಲ್ಲಿ ಶ್ರೀಮತಿ ಮಂಜುಳ ಎಸ್. ಇವರ ಮೇಲಿನ ಆರೋಪದ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಶ್ರೀ ಎಸ್.ಎಸ್.ಶೇರಿಗಾರ್, ವಕೀಲರು ಇವರನ್ನು ನೇಮಕ ಮಾಡಿದ್ದು, ಸದರಿಯವರು ದಿನಾಂಕ: 09-01-2008ರಲ್ಲಿ ಸಲ್ಲಿಸಿದ ವರದಿಯಲ್ಲಿ "ಆರೋಪಿತರು ಸುಳ್ಳು ಚಲನ್, ಸುಳ್ಳು ಮನವಿ ಮತ್ತು ಸುಳ್ಳು ಪ್ರಾವಿಜನಲ್ ಅಡ್ಮಿಷನ್ ಪ್ರಮಾಣ ಪತ್ರ ಸೃಷ್ಟಿಸಿ ಇಬ್ಬರು ವಿದ್ಯಾರ್ಥಿನಿಯರಿಗೆ ದಿನಾಂಕ:15-11-2006 ರಂದು 1ನೇ ಬಿ.ಎಸ್ಸಿ. ಗೆ ಸೇರಲು ಅವಕಾಶ ಮಾಡಿದ ಆರೋಪ ರುಜುವಾತಾಗಿದೆ ಹಾಗೂ ವಿದ್ಯಾರ್ಥಿಗಳಿಂದ ಪಡೆದ ಫೀಜು ರೂ. 7,700-00ನ್ನು ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗೆ ಜಮಾ ಮಾಡದೇ ಶ್ರೀಮತಿ ಎಸ್.ಮಂಜುಳ, ಕಿರಿಯ ಸಹಾಯಕರು ದುರುಪಯೋಗಪಡಿಸಿಕೊಂಡ ಆರೋಪ ಕೂಡ ರುಜುವಾತಾಗಿದೆ ಎಂದು ತಿಳಿಸಿರುತ್ತಾರೆ".

ಶ್ರೀಮತಿ ಮಂಜುಳ ಎಸ್. ಇವರ ಮೇಲಿನ ಆರೋಪದ ಕುರಿತು ಇಲಾಖಾ ವಿಚಾರಣೆ ನಡೆಸುವ ಬಗ್ಗೆ, ಆದೇಶ ಸಂಖ್ಯೆ:ಕುವಿ:ಮಾಸನಿ-2: ವೈ.ಕ:4123:2008-09 ದಿನಾಂಕ:06-10-2008ರಲ್ಲಿ ಶ್ರೀಮತಿ ಮಂಜುಳಾ ಸಿ, ವಕೀಲರು ಇವರನ್ನು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577
ಶಿವಮೊಗ್ಗ ಜಿಲ್ಲೆ.



Scanned with OKEN Scanner

ವಿಚಾರಣಾಧಿಕಾರಿಯಾಗಿ ಹಾಗೂ ಶ್ರೀಮತಿ ಅಂಬುಜ ಎಸ್, ಸಹಾಯಕ ಕುಲಸಚಿವರು, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ದಿನಾಂಕ: 10-10-2008ರಲ್ಲಿ ಶ್ರೀಮತಿ ಅಂಬುಜ ಎಸ್ ಇವರು ವೈಯಕ್ತಿಕ ಕಾರಣದಿಂದಾಗಿ ಮಂಡನಾಧಿಕಾರಿಯ ಆದೇಶವನ್ನು ಹಿಂಪಡೆಯುವಂತೆ ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ದಿನಾಂಕ:18-12-2008ರಲ್ಲಿ ಮಂಡನಾಧಿಕಾರಿಯನ್ನಾಗಿ ನೇಮಿಸಿರುವುದನ್ನು ರದ್ದುಗೊಳಿಸಲಾಗಿರುತ್ತದೆ. ಸದರಿಯವರ ಸ್ಥಾನಕ್ಕೆ ಶ್ರೀಮತಿ ಡಿ.ವಿ.ಗಾಯತ್ರಿ ಸಹಾಯಕ ಕುಲಸಚಿವರು ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲಾಗಿತ್ತು.

ಶ್ರೀಮತಿ ಮಂಜುಳ ಎಸ್, ಕಿರಿಯ ಸಹಾಯಕರು ಇವರಿಗೆ ಸಂಖ್ಯೆ:ಕುವಿ:ಮಾಸನಿ-2:ವೈ.ಕ:2008-09:795 ದಿನಾಂಕ:13-05-2008 ರಲ್ಲಿ ಆರೋಪ ಪಟ್ಟಿಯನ್ನು ಜಾರಿಗೊಳಿಸಲಾಗಿತ್ತು. ಸದರಿಯವರು ದೋಷಾರೋಪಣ ಪತ್ರವನ್ನು ದಿನಾಂಕ: 23-05-2008 ರಂದು ಸ್ವೀಕರಿಸಿ ದಿನಾಂಕ:04-06-2008 ರಂದು ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

ಶ್ರೀಮತಿ ಡಿ.ವಿ. ಗಾಯತ್ರಿ, ಸಹಾಯಕ ಕುಲಸಚಿವರು ಇವರು ದಿನಾಂಕ:17-02-2009ರಲ್ಲಿ ಮನವಿ ಸಲ್ಲಿಸಿ, ಕಛೇರಿ ಕೆಲಸದ ಒತ್ತಡ ಮತ್ತು ವೈಯಕ್ತಿಕ ಕಾರಣಗಳಿಂದಾಗಿ ಸದರಿ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿರುತ್ತಾರೆ.

ತದನಂತರ ಶ್ರೀಮತಿ ಡಿ.ವಿ .ಗಾಯತ್ರಿ ಇವರನ್ನು ಮಂಡನಾಧಿಕಾರಿಯಿಂದ ಬಿಡುಗಡೆಗೊಳಿಸಿ, ಸದರಿಯವರ ಸ್ಥಾನಕ್ಕೆ ಶ್ರೀ ಅಜ್ಜಪ್ಪ ಎನ್, ಉಪಕುಲಸಚಿವರು ಇವರನ್ನು ಆದೇಶ ಸಂಖ್ಯೆ:ಕುವಿ:ಮಾಸನಿ-2: 2008-09:8071 ದಿನಾಂಕ:18-03-2009ರಲ್ಲಿ ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.

ಸುಮಾರು 11 ವರ್ಷಗಳ ನಂತರ ಪತ್ರ ಸಂಖ್ಯೆ:ಕುವಿ:ಮಾಸನಿ-2:3277:2020-21 ದಿನಾಂಕ:19-11-2020ರಲ್ಲಿ ಇಲಾಖಾ ವಿಚಾರಣೆಯ ಪ್ರಗತಿ / ವರದಿಯನ್ನು ಸಂಬಂಧಿಸಿದ ಪ್ರಾಧಿಕಾರಕ್ಕೆ ಸಲ್ಲಿಸಲಾಗಿರುವ ಮಾಹಿತಿಯನ್ನು ತುರ್ತಾಗಿ ಕುಲಸಚಿವರಿಗೆ ಸಲ್ಲಿಸುವಂತೆ ಸದರಿಯವರಿಗೆ ಪತ್ರಿಸಲಾಗಿತ್ತು.

ದಿನಾಂಕ:11-12-2020ರಲ್ಲಿ ಶ್ರೀ ಅಜ್ಜಪ್ಪ ಎನ್, ನಿವೃತ್ತ ಉಪಕುಲಸಚಿವರು ಮಂಡನಾಧಿಕಾರಿಯಾದ ನನ್ನನ್ನು ಆರೋಪದ ಬಗ್ಗೆ ಮಂಡನೆ ಮಾಡಲು ಆಹ್ವಾನಿಸಿರುವುದಿಲ್ಲ ಹಾಗೂ ಈ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ, ಹಾಗೂ ನನ್ನನ್ನು ಮಂಡನಾಧಿಕಾರಿಯಾಗಿ ನೇಮಕ ಮಾಡುವ ಪೂರ್ವದಲ್ಲಿ ನೇಮಕಮಾಡಿದ್ದ ಮಂಡನಾಧಿಕಾರಿಗಳು ನನಗೆ ಆರೋಪದ ಪಟ್ಟಿ, ಸಿ.ಸಿ ಪರಿನಿಯಮದ ಪ್ರತಿ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಸಹ ವಹಿಸಿರುವುದಿಲ್ಲ ಶ್ರೀಮತಿ ಮಂಜುಳ ಎಸ್, ಕಿರಿಯ ಸಹಾಯಕರು ಇವರ ವಿರುದ್ಧದ ಇಲಾಖಾ ವಿಚಾರಣೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ವಿಚಾರಣೆಗೆ ಆಹ್ವಾನಿಸಿ ಆರೋಪದ ಬಗ್ಗೆ ದಾಖಲೆ ಮಂಡನೆ ಮಾಡಲು ಆಹ್ವಾನಿಸುತ್ತಾರೆಂದು ನಿರೀಕ್ಷಿಸುತ್ತಿದ್ದೆ. ಆದರೆ, ತನಿಖಾಧಿಕಾರಿಗಳಿಂದ ಯಾವುದೇ ಸೂಚನೆ ಬಾರದಿರುವುದರಿಂದ ನನ್ನ ಕರ್ತವ್ಯ ನಿರ್ವಹಿಸಿರುವುದಿಲ್ಲ. ಸದರಿ ಆದೇಶವಾಗಿ 10 ವರ್ಷಗಳಿಗಿಂತ ಮೇಲ್ಪಟ್ಟು ಸಮಯ ಗತಿಸಿರುವುದರಿಂದ ಹಾಗೂ ನಾನು 2017ರಲ್ಲಿ ವಯೋ ನಿವೃತ್ತಿ ಹೊಂದಿರುವ ಹಿನ್ನೆಲೆಯಲ್ಲಿ ದಯಮಾಡಿ ಮಂಡನಾಧಿಕಾರಿ ಕರ್ತವ್ಯದಿಂದ ನನ್ನನ್ನು ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

ತದ ನಂತರದಲ್ಲಿ ಆದೇಶ ಸಂಖ್ಯೆ:ಕುವಿ:ಮಾಸನಿ-2:4385:2020-21 ದಿನಾಂಕ:13-01-2021ರಂದು ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿ ನೇಮಕಾತಿ ಆದೇಶವನ್ನು ಪುನಃ ಹೊರಡಿಸಲಾಗಿತ್ತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ



Scanned with OKEN Scanner

ದಿನಾಂಕ:13-01-2021 ರಂದು ಹೊರಡಿಸಿರುವ ವಿಶ್ವವಿದ್ಯಾಲಯದ ಆದೇಶವನ್ನು ಪ್ರಶ್ನಿಸಿ, ಶ್ರೀಮತಿ.ಮಂಜುಳ ಎಸ್ – ಇವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು (ಸಂಖ್ಯೆ:WP No:4187/2021) ರಲ್ಲಿ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯವು 12.5 ವರ್ಷಗಳಿಗಿಂತಲೂ ಹೆಚ್ಚಿನ ಸುದೀರ್ಘ ಅವಧಿಯ ನಂತರ ವಿಶ್ವವಿದ್ಯಾಲಯವು ಯಾವುದೇ ಸೂಕ್ತ ಕಾರಣವಿಲ್ಲದೆ ಪುನರಾರಂಭಿಸಿದ್ದು, ಸಮಂಜಸವಾಗಿರುವುದಿಲ್ಲವೆಂದು ತಿಳಿಸಿ ದಿನಾಂಕ:13-01-2021ರಲ್ಲಿ ಹೊರಡಿಸಲಾಗಿರುವಂತಹ ವಿಶ್ವವಿದ್ಯಾಲಯದ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:31-10-2025 ರಂದು ರದ್ದುಗೊಳಿಸಿರುತ್ತದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯದ ಸುತ್ತೋಲೆ ಸಂಖ್ಯೆ:ಸಿಆಸುಇ 12 ಸೇಸೇನಿ 2001 ಬೆಂಗಳೂರು, ದಿನಾಂಕ: 2ನೇ ಮೇ 2001ರಲ್ಲಿ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವ ಸರ್ಕಾರಿ ನೌಕರರನ್ನು ಮುಂಬಡ್ತಿಗೆ ಪರಿಗಣಿಸುವಾಗ ಮೊಹರಾದ ಲಕೋಟೆ ಪದ್ಧತಿ ಅನುಸರಿಸುವ ಬಗ್ಗೆ ದಿನಾಂಕ:14-07-1993ರ ಅಧಿಕೃತ ಜ್ಞಾಪನದಲ್ಲಿ ಸೂಚನೆಗಳನ್ನು ನೀಡಲಾಗಿದೆ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು "ಯೂನಿಯನ್ ಆಫ್ ಇಂಡಿಯಾ – ವಿರುದ್ಧ –ಕೆ.ವಿ.ಜಾನಕಿರಾಮನ್ ಮತ್ತು ಇತರರು" (1991 (4) ಎಸ್‌ಸಿಸಿ 109) ಪ್ರಕರಣದಲ್ಲಿ ಈ ಕೆಳಕಂಡಂತೆ ತಿಳಿಸಿದೆ:

"... An employee has no right to promotion. He has only a right to be considered for promotion. The promotion to a post, and more so, to a selection post, depends upon several circumstances. To qualify for promotion, the least that is expected of an employee is to have an unblemished record. That is the minimum expected to ensure a clean and efficient administration and to protect the public interests. An employee found guilty of a misconduct cannot be placed on par with the other employees and his case has to be treated differently. There is, therefore, no discrimination when in the matter of promotion, he is treated differently. The least that is expected of any administration is that it does not reward an employee with promotion retraspectively form a date when for his conduct before that date is penalized in present. When an employee is held guilty and penalized, and is, therefore, not promoted at least till the date on which he is penalized, he cannot be said to have been subjected to a further penalty on that account. A denial of promotion in such circumstances is not a penalty but a necessary consequence of his conduct. In fact, while considering an employee for promotion his whole records has to be taken into consideration, and if a promotion committee takes the penalty imposed upon the employee into consideration and denies him the promotion, such denial is not illegal and unjustified..."

ಸರ್ವೋಚ್ಚ ನ್ಯಾಯಾಲಯದ ಮೇಲ್ಕಂಡ ತೀರ್ಪಿನ ಹಿನ್ನೆಲೆಯಲ್ಲಿ, ಸರ್ಕಾರಿ ನೌಕರನ ವಿರುದ್ಧ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆ ಪ್ರಾರಂಭವಾಗಿ ಅಂತಹ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆಗಳು ದಂಡನೆಯಲ್ಲಿ ಪರ್ಯಾವಸನಗೊಂಡಲ್ಲಿ, ಆ ದಂಡನೆಯು ಜಾರಿಯಲ್ಲಿರುವ ಅವಧಿಯಲ್ಲಿ ಅಂತಹ ಸರ್ಕಾರಿ ನೌಕರರಿಗೆ ಮುಂಬಡ್ತಿ ನೀಡಲು ಆಸ್ಪದವಿಲ್ಲವೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

ಪ್ರಕರಣ 2007 ರಿಂದ ಚಾಲ್ತಿಯಲ್ಲಿದ್ದು, ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದ ಅವಧಿಯಲ್ಲಿ ಹಾಗೂ ಅಂತಿಮ ಆದೇಶವು ಜಾರಿಗೊಂಡ ನಂತರ, ಆದೇಶದನ್ವಯ ಕ್ರಮವಹಿಸುವ ಪೂರ್ವದಲ್ಲಿ ಶ್ರೀಮತಿ. ಮಂಜುಳ ಎಸ್ – ಇವರಿಗೆ ಈ ಕೆಳಕಂಡಂತೆ ವಿವಿಧ ದಿನಾಂಕಗಳಲ್ಲಿ ವಿವಿಧ ವೃಂದಗಳಿಗೆ ಬಡ್ತಿಯನ್ನು ನೀಡಲಾಗಿದೆ.

| ಕ್ರ.ಸಂ. | ಬಡ್ತಿ ನೀಡಲಾಗಿರುವ ಹುದ್ದೆ | ದಿನಾಂಕ |
|---|---|---|
| 1) | ಪ್ರಥಮ ದರ್ಜೆ ಸಹಾಯಕ | 28–05–2014 |
| 2) | ಹಿರಿಯ ಸಹಾಯಕ | 23–07–2024 |
| 3) | ಶಾಖಾಧಿಕಾರಿ | 04–04–2026 |

ಪ್ರಸ್ತುತ ಶ್ರೀಮತಿ ಮಂಜುಳ ಎಸ್ – ಇವರಿಗೆ ವಿವಿಧ ವೃಂದಗಳಲ್ಲಿ ನೀಡಲಾದ ಬಡ್ತಿಯನ್ನು ಕರ್ನಾಟಕ ಹೈಕೋರ್ಟ್ ರಿಟ್ ಅರ್ಜಿ ಸಂಖ್ಯೆ: WP No: 4187/2021ಕ್ಕೆ ನೀಡಿರುವ ಅಂತಿಮ ಆದೇಶದನ್ವಯ ಪರಿಶೀಲಿಸಿ, ಶ್ರೀಮತಿ. ಮಂಜುಳ ಎಸ್ – ಇವರಿಗೆ ವಿವಿಧ ಹಂತಗಳಲ್ಲಿ ನೀಡಲಾಗಿರುವ ಬಡ್ತಿಗಳನ್ನು ಪುನರ್ ವಿಮರ್ಶಿಸಲು ಸಭೆಗೆ ಮಂಡಿಸಲಾಗಿದೆ ಎಂದರು. ಹಾಗೂ ನ್ಯಾಯಾಲಯದ ಆದೇಶಕ್ಕೆ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲವೆಂದರು.

ವಿಶ್ವವಿದ್ಯಾಲಯದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಎಲ್ಲಾ ಸದಸ್ಯರುಗಳು ಪ್ರಕರಣ ನಡೆದು ಹಲವು ವರ್ಷಗಳೇ ಕಳೆದಿರುವುದರಿಂದ ಹಾಗೂ ನ್ಯಾಯಾಲಯವು ವಿಶ್ವವಿದ್ಯಾಲಯದ ಆದೇಶವನ್ನು ರದ್ದುಪಡಿಸಿರುವ ಹಿನ್ನೆಲೆಯಲ್ಲಿ ಈ ಹಂತದಲ್ಲಿ ಮೇಲ್ಮನವಿಯನ್ನು ಸಲ್ಲಿಸುವುದು ಸೂಕ್ತವಲ್ಲವಾದ್ದರಿಂದ ಇವರಿಗೆ ವೇತನ ನಿಗದೀಕರಣ ಮಾಡುವುದು ಸೂಕ್ತವೆಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಪ್ರಕರಣ ನಡೆದು ಈಗಾಗಲೆ ಹಲವು ವರ್ಷಗಳು ಕಳೆದಿರುವುದರಿಂದ ಹಾಗೂ ಈ ಹಂತದಲ್ಲಿ ಮೇಲ್ಮನವಿ ಸಲ್ಲಿಸಿದರೂ ಉಪಯೋಗವಿಲ್ಲವೆಂದು ಹಲವು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ, ಶ್ರೀಮತಿ ಮಂಜುಳ ಎಸ್ – ಇವರಿಗೆ ಶಾಖಾಧಿಕಾರಿ ಹುದ್ದೆಯ ವೇತನ ನಿಗದೀಕರಣ ಮಾಡಲು ಸಭೆಯು ಅನುಮೋದನೆ ನೀಡಿತು.

**2026–ಸಿಂ–4.21:** ಕುವೆಂಪು ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಶ್ರೀ ವಿದ್ಯಾಶಂಕರ್ ಎಂ.ಹೆಚ್. ಇವರು ಸುಳ್ಳು ಪಿಹೆಚ್.ಡಿ ಮತ್ತು ಎಂ.ಟೆಕ್ ಪದವಿ ಪ್ರಮಾಣ ಪತ್ರ ನೀಡಿ ನೇಮಕಗೊಂಡಿರುವ ಬಗ್ಗೆ – ವಿಶ್ವವಿದ್ಯಾಲಯದಿಂದ ಕೈಗೊಂಡ ಕ್ರಮದ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಶ್ರೀ ವಿದ್ಯಾಶಂಕರ್ ಎಂ.ಹೆಚ್. ಇವರು ಸುಳ್ಳು ಪಿಹೆಚ್.ಡಿ ಮತ್ತು ಎಂ.ಟೆಕ್ ಪದವಿ ಪ್ರಮಾಣ ಪತ್ರ ನೀಡಿ ನೇಮಕಗೊಂಡಿರುವ ಬಗ್ಗೆ –ಸರ್ಕಾರದ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ಶ್ರೀ ವಿದ್ಯಾಶಂಕರ್ ಎಂ.ಹೆಚ್. ಇವರ ನೇಮಕಾತಿ ಹಾಗೂ ಶಿಸ್ತು ಪ್ರಾಧಿಕಾರ ವಿಶ್ವವಿದ್ಯಾಲಯವಾಗಿರುವುದರಿಂದ, ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ಇವರನ್ನು ಸೇವೆಯಿಂದ ವಜಾಗೊಳಿಸಲು ಕೂಡಲೇ ಕ್ರಮವಹಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ನಿರ್ದೇಶಿಸಲಾಗಿದೆ.

ಅದರಂತೆ, ಶ್ರೀ ವಿದ್ಯಾಶಂಕರ್ ಎಂ.ಹೆಚ್. ಸಹಾಯಕ ಪ್ರಾಧ್ಯಾಪಕರು ಇವರನ್ನು ಸೇವೆಯಿಂದ ವಜಾಗೊಳಿಸುವ ಕುರಿತು, ವಿಶ್ವವಿದ್ಯಾಲಯದ ನೇಮಕಾತಿ ಪ್ರಾಧಿಕಾರವಾದ ಸಿಂಡಿಕೇಟ್

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಅನುಮೋದನೆಯೊಂದಿಗೆ ಸದರಿಯವರಿಗೆ ದಿನಾಂಕ:11-05-2026 ರಂದು (ಉಲ್ಲೇಖ (2)ರಲ್ಲಿ) ನೋಟೀಸ್ ನೀಡಲಾಗಿದೆ. ಈ ಪ್ರಕರಣದ ಕುರಿತು ವಿಶ್ವವಿದ್ಯಾಲಯದಿಂದ ಮಾನ್ಯ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯಕ್ಕೆ ಕೆವಿಯಟ್‌ನ್ನು (Caveat Petition FR No.12824 ರಲ್ಲಿ) ಸಹ ಸಲ್ಲಿಸಲಾಗಿದೆ ಎಂಬ ಅಂಶವನ್ನು ದಿನಾಂಕ:19-05-2026 ರಂದು (ಉಲ್ಲೇಖ (3)ರಲ್ಲಿ) ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗಿದೆ.

ಮುಂದುವರೆದು, ವಿಶ್ವವಿದ್ಯಾಲಯವು ಜಾರಿಗೊಳಿಸಿರುವ ಕಾರಣ ಕೇಳಿ ನೋಟೀಸಿಗೆ ಸಂಬಂಧಿಸಿದಂತೆ ಶ್ರೀ ವಿದ್ಯಾಶಂಕರ್ ಎಂ.ಹೆಚ್ ಇವರು ಮಾನ್ಯ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ: 15502/2026 (S-DIS) ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ಉಲ್ಲೇಖ (4)ರಲ್ಲಿ ಮುಂದಿನ ವಿಚಾರಣೆಯವರೆಗೆ ತಡೆಯಾಜ್ಞೆ ನೀಡಿ ವಿಚಾರಣೆಯನ್ನು ಮುಂದೂಡಿರುತ್ತದೆ ಎಂಬ ಅಂಶವನ್ನು ದಿನಾಂಕ:26-05-2026 ರಂದು (ಉಲ್ಲೇಖ (5)ರಲ್ಲಿ) ಸರ್ಕಾರದ ಅವಗಾಹನೆಗೆ ಸಲ್ಲಿಸಲಾಗಿದೆ ಎಂಬ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಮಂಡಿಸಿದೆ ಎಂದರು.

**ನಿರ್ಣಯ:** ಸಹಾಯಕ ಪ್ರಾಧ್ಯಾಪಕರಾದ ಶ್ರೀ ವಿದ್ಯಾಶಂಕರ್ ಎಂ.ಹೆಚ್. ಇವರು ಸುಳ್ಳು ಪಿಹೆಚ್.ಡಿ ಮತ್ತು ಎಂ.ಟೆಕ್ ಪದವಿ ಪ್ರಮಾಣ ಪತ್ರ ನೀಡಿ ನೇಮಕಗೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯವು ಕೈಗೊಂಡ ಕ್ರಮದ ವರದಿಯನ್ನು ಸಭೆಯು ಅನುಮೋದಿಸಿತು.

**2026-ಸಿಂ-4.21(ಎ):** ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ಮತ್ತು ಎಸ್ಟೇಟ್ ವಿಭಾಗಗಳನ್ನು ವಿಲೀನಗೊಳಿಸುವ ಕುರಿತು.

**ಚರ್ಚೆ** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ವಿಶ್ವವಿದ್ಯಾಲಯದಲ್ಲಿ ಅನೇಕ ಅಧ್ಯಾಪಕೇತರ ನೌಕರರು ವಯೋ ನಿವೃತ್ತಿ ಹೊಂದಿದ್ದು, ಅನೇಕ ವಿಭಾಗಗಳಲ್ಲಿ ಕಛೇರಿ ಕೆಲಸ ಕಾರ್ಯಗಳಿಗೆ ನೌಕರರ ಅಭಾವದಿಂದ ಅನಾನುಕೂಲವಾಗಿದೆ. ಇಂಜಿನಿಯರಿಂಗ್ ಮತ್ತು ಎಸ್ಟೇಟ್ ವಿಭಾಗವು ಒಂದೇ ಕಟ್ಟಡದಲ್ಲಿರುವುದರಿಂದ ಮತ್ತು ಈ ಎರಡೂ ವಿಭಾಗಗಳ ಕಾರ್ಯಕ್ಕೆ ಸಾಮ್ಯತೆ ಇರುವುದರಿಂದ ಇಂಜಿನಿಯರಿಂಗ್ ಮತ್ತು ಎಸ್ಟೇಟ್ ವಿಭಾಗವನ್ನು ವಿಲೀನಗೊಳಿಸಿ ವಿಭಾಗದ ತಾಂತ್ರಿಕ ಸಿಬ್ಬಂದಿಗಳನ್ನು ಹೊರತುಪಡಿಸಿ, ಉಳಿದ ಸಿಬ್ಬಂದಿಗಳು ಎರಡು ವಿಭಾಗದ ಕಛೇರಿ ಕಾರ್ಯಗಳನ್ನು ಕೈಗೊಳ್ಳಲು ಅನುವಾಗುವಂತೆ ಎರಡು ವಿಭಾಗಗಳನ್ನು ವಿಲೀನಗೊಳಿಸಲು ಸಭೆಯ ಅನುಮೋದನೆಗೆ ಮಂಡಿಸಲಾಗಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಆಡಳಿತದ ಹಿತದೃಷ್ಟಿಯಿಂದ ಇಂಜಿನಿಯರಿಂಗ್ ಮತ್ತು ಎಸ್ಟೇಟ್ ವಿಭಾಗವನ್ನು ವಿಲೀನಗೊಳಿಸಿ ವಿಭಾಗದ ತಾಂತ್ರಿಕ ಸಿಬ್ಬಂದಿಗಳನ್ನು ಹೊರತುಪಡಿಸಿ, ಉಳಿದ ಸಿಬ್ಬಂದಿಗಳು ಎರಡೂ ವಿಭಾಗದಲ್ಲಿ ಕೆಲಸ ನಿರ್ವಹಿಸಲು ಸೂಚಿಸಿ ಎರಡು ವಿಭಾಗಗಳನ್ನು ವಿಲೀನಗೊಳಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

## ಎಸ್ಟೇಟ್ ವಿಭಾಗ

**2026-ಸಿಂ-4.22:** ಅರಣ್ಯ ಇಲಾಖೆಯಿಂದ ಕುವೆಂಪು ವಿಶ್ವವಿದ್ಯಾಲಯಕ್ಕೆ ಗುತ್ತಿಗೆ ಆಧಾರದಲ್ಲಿ ಮಂಜೂರಾಗಿರುವ ಒಟ್ಟು 89.92 ಹೆಕ್ಟರ್ ಭೂಪ್ರದೇಶದ ಗುತ್ತಿಗೆ ಅವಧಿ ನವೀಕರಿಸುವ ಸಂಬಂಧ ಎನ್.ಪಿ.ವಿ. ಮೊತ್ತವನ್ನು ಪಾವತಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ ಕುವೆಂಪು ವಿಶ್ವವಿದ್ಯಾಲಯಕ್ಕೆ ಅರಣ್ಯ ಇಲಾಖೆಯಿಂದ ಮಂಜೂರಾಗಿರುವ ಒಟ್ಟು 89.92 ಹೆಕ್ಟೇರ್‌ನಷ್ಟು ಭೂಪ್ರದೇಶದ ಗುತ್ತಿಗೆ ಅವಧಿ ನವೀಕರಣಕ್ಕಾಗಿ ಅರಣ್ಯ ಸಂರಕ್ಷಣೆ ಕಾಯ್ದೆ 1980ರ ಕಲಂ(02)ರ ಅಡಿಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಅರಣ್ಯ ಇಲಾಖೆಯ ವೆಬ್ ಪೋರ್ಟಲ್ ಮೂಲಕ ಆನ್‌ಲೈನ್ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು ಹಾಗೂ ಗುತ್ತಿಗೆ ನವೀಕರಣಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯವರು ಕೇಳಿರುವ ಎಲ್ಲಾ

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

ದಾಖಲಾತಿಗಳನ್ನು ಒದಗಿಸಿದ್ದರಿಂದ, ಅರಣ್ಯ ಗುತ್ತಿಗೆ ನವೀಕರಣ Stage-I clearance ಹಂತವು ಪೂರ್ಣಗೊಂಡಿರುತ್ತದೆ. ಈ ಸಂಬಂಧ ಒಟ್ಟು 89.92 ಹೆಕ್ಟೇರ್‌ನ ಭೂಪ್ರದೇಶದ ಗುತ್ತಿಗೆ ಅವಧಿ ನವೀಕರಣ NPV(Net Present Value) ಮೊತ್ತವನ್ನು ಪಾವತಿಸಲು 'ಡಿಮ್ಯಾಂಡ್ ನೋಟ್'ನ್ನು ನೀಡುವಂತೆ ಕ್ಷೇತ್ರ ನಿರ್ದೇಶಕರು, ಕ್ಷೇತ್ರ ನಿರ್ದೇಶಕರ ಕಛೇರಿ, ಭದ್ರಾ ಹುಲಿ ಸಂರಕ್ಷಿತ, ಚಿಕ್ಕಮಗಳೂರು – ಇವರಿಗೆ ಕೋರಲಾಗಿತ್ತು ಇದಕ್ಕೆ ಸಂಬಂಧಿಸಿದಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು, ಭದ್ರಾ ಹುಲಿ ಸಂರಕ್ಷಿತ ಪ್ರದೇಶ, ಚಿಕ್ಕಮಗಳೂರು – ಇವರು ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು Diversion of 89.92 has of forest land ಪ್ರದೇಶಗಳನ್ನು ಅರಣ್ಯೀಕರಣ ಮಾಡಲು ಗುರುತಿಸಿ ಕೆಲವು ಷರತ್ತುಗಳನ್ನು ವಿಧಿಸಿ, ಉಲ್ಲೇಖ(02)ರ ಪತ್ರದಲ್ಲಿ ಗುತ್ತಿಗೆ ಅವಧಿ ನವೀಕರಣಕ್ಕಾಗಿ NPV( Net Present Value) ಮೊತ್ತ ಒಟ್ಟು ರೂ. 1,00,36,52,388/- ಗಳ ಬೇಡಿಕೆ ಪಟ್ಟಿಯನ್ನು ಸಲ್ಲಿಸಿ, Stage-II clearance ನ ಅನುಮೋದನೆಯನ್ನು ಪಡೆಯುವ ಸಲುವಾಗಿ ಸಂಬಂಧಿಸಿದ ಮೊತ್ತವನ್ನು ವೆಬ್ ಪೋರ್ಟಲ್ ನ ಮೂಲಕ ಪಾವತಿಸಿ, ತಿಳಿಸಲಾಗಿರುವ ಎಲ್ಲಾ ಷರತ್ತುಗಳಿಗೆ' ಅನುಸರಣಾ ವರದಿ 'ಯನ್ನು 30 ದಿನದೊಳಗಾಗಿ ಸಲ್ಲಿಸುವಂತೆ ತಿಳಿಸಿರುತ್ತಾರೆ.

ಆದರೆ ಅರಣ್ಯ ಗುತ್ತಿಗೆ ನವೀಕರಣದ NPV ಮತ್ತು CA ಮೊತ್ತ ಪಾವತಿ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಕುವೆಂಪು ವಿಶ್ವವಿದ್ಯಾಲಯಕ್ಕೆ ಒಟ್ಟು ರೂ. 14.50 ಕೋಟಿಗಳಷ್ಟು ಅನುದಾನವನ್ನು ಮಾತ್ರ ಬಿಡುಗಡೆ ಮಾಡಿರುತ್ತದೆ. ಇನ್ನು ಬಾಕಿ ರೂ. 86.00 ಕೋಟಿಗಳಷ್ಟು ಅನುದಾನದ ಕೊರತೆ ಕಂಡುಬಂದಿರುತ್ತದೆ ಎಂಬ ಮಾಹಿತಿಯನ್ನು ಸಿಂಡಿಕೇಟ್‌ನ ಗಮನಕ್ಕೆ ತಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಮಾನ್ಯ ಕುಲಪತಿಗಳು, ಕುಲಸಚಿವರು ಹಾಗೂ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ನಿಯೋಗವು ಸ್ಥಳೀಯ ಲೋಕಸಭಾ ಸಚಿವರುಗಳು, ಜಿಲ್ಲಾ ಸಚಿವರು, ರಾಜ್ಯ ಅರಣ್ಯ ಸಚಿವರು, ಕೇಂದ್ರ ಸಚಿವರಾದ ಶ್ರೀ ವಿ. ಸೋಮಣ್ಣ, ಲೋಕ ಸಭಾ ಸದಸ್ಯರು, ತುಮಕೂರು ಲೋಕ ಸಭಾ ಕ್ಷೇತ್ರ ಮತ್ತು ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಲೋಕ ಸಭಾ ಸದಸ್ಯರು, ಹಾಸನ ಲೋಕ ಸಭಾ ಕ್ಷೇತ್ರ ಇವರನ್ನು ಭೇಟಿ ಮಾಡಿ ಕುವೆಂಪು ವಿಶ್ವವಿದ್ಯಾಲಯಕ್ಕೆ ಅರಣ್ಯ ಇಲಾಖೆಯಿಂದ ಮಂಜೂರಾಗಿರುವ ಒಟ್ಟು 89.92 ಹೆಕ್ಟೇರ್‌ನಷ್ಟು ಭೂಪ್ರದೇಶದ ಗುತ್ತಿಗೆ ಅವಧಿ ನವೀಕರಣಕ್ಕಾಗಿ ಒಟ್ಟು 89.92 ಹೆಕ್ಟೆರ್‌ನ ಭೂಪ್ರದೇಶದ ಗುತ್ತಿಗೆ ಅವಧಿ ನವೀಕರಣಕ್ಕಾಗಿ NPV (Net Present Value) ರೂ.1,00,36,52,388/-ಗಳ ' ಡಿಮ್ಯಾಂಡ್ ನೋಟ್'ನ್ನು ನೀಡಿರುವ ಅಂಶವನ್ನು ಗಮನಕ್ಕೆ ತರಲು ನಿರ್ಣಯಿಸಲಾಯಿತು. ಈ ಬಗ್ಗೆ ಸಮಯಾವಕಾಶ ನೀಡುವಂತೆ ಕೇಂದ್ರ ಅರಣ್ಯ ಇಲಾಖೆಗೆ ಕೋರಲು ಹಾಗೂ ಅನುದಾನದ ಕೊರತೆ ಇರುವುದರಿಂದ ಸರ್ಕಾರದಿಂದಲೇ ಭರಿಸುವ ಸಂಬಂಧ ಮಾರ್ಗದರ್ಶನ ಕೋರುವ ಬಗ್ಗೆಯೂ ಚರ್ಚಿಸಿ ತೀರ್ಮಾನ ಕೈಗೊಳ್ಳಲು ನಿರ್ಣಯಿಸಲಾಯಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2026-ಸಿಂ-4.23:** ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಿಂದ ಔಷಧಿ ಸೌಲಭ್ಯ ಪಡೆಯುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಆರೋಗ್ಯ ಕೇಂದ್ರವನ್ನು ವಿದ್ಯಾರ್ಥಿಗಳಿಗಾಗಿ ಸ್ಥಾಪಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಮಾತ್ರ ಆರೋಗ್ಯ ತಪಾಸಣೆ ಮತ್ತು ಉಚಿತವಾಗಿ ಔಷಧಿಗಳನ್ನು ವಿತರಿಸಬೇಕು. ಸಿಬ್ಬಂದಿಗಳಿಗೆ ನಿಯಮಾನುಸಾರ ವೈದ್ಯಕೀಯ ಮರುಭರಿಕೆ ಇರುವುದರಿಂದ ಔಷಧಿಗಳನ್ನು ಹೊರಗಡೆ ತೆಗೆದುಕೊಳ್ಳಲು ಸೂಚಿಸಬೇಕಾಗುತ್ತದೆ ಎಂದರು. ಸಿಬ್ಬಂದಿಗಳಿಗೆ ಸಿ.ಜಿ.ಹೆಚ್.ಎಸ್. ದರದಲ್ಲಿ ತಪಾಸಣಾ ದರಗಳನ್ನು ನಿಗದಿಪಡಿಸಬೇಕಾಗುತ್ತದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ನಿರ್ಣಯ: ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಮಾತ್ರ ಆರೋಗ್ಯ ತಪಾಸಣೆ, ಪ್ರಯೋಗಾಲಯ ಪರೀಕ್ಷೆ ಮತ್ತು ಔಷಧಿಗಳನ್ನು ಉಚಿತವಾಗಿ ವಿತರಿಸಲು ನಿರ್ಣಯಿಸಿ, ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಉಚಿತವಾಗಿ ಆರೋಗ್ಯ ತಪಾಸಣೆಯನ್ನು ಮಾತ್ರ ಮಾಡಲು ಉಳಿದಂತೆ ಪ್ರಯೋಗಾಲಯ ಪರೀಕ್ಷೆಗಳಿಗೆ ಸಿ.ಜಿ.ಹೆಚ್.ಎಸ್. ದರದಲ್ಲಿ ದರ ನಿಗದಿಪಡಿಸಿ ದರಗಳನ್ನು ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ನಿರ್ಣಯಿಸಲಾಯಿತು.

ಅಧ್ಯಾಪಕ / ಅಧ್ಯಾಪಕೇತರ ಸಿಬ್ಬಂದಿಯವರಿಗೆ ಯಾವುದೇ ರೀತಿಯ ಔಷಧಿಗಳನ್ನು ಆರೋಗ್ಯ ಕೇಂದ್ರದಿಂದ ವಿತರಿಸದೇ ಇರಲು ನಿರ್ಣಯಿಸಲಾಯಿತು.

ಆರೋಗ್ಯ ಕೇಂದ್ರದಲ್ಲಿ ಮಂಜೂರಾದ ಖಾಯಂ ವೈದ್ಯಾಧಿಕಾರಿ ಹುದ್ದೆ ಇದ್ದು ಖಾಲಿ ಇರುವುದರಿಂದ, ಸದರಿ ಹುದ್ದೆಯ ನೇಮಕಾತಿಗೆ ಅನುಮತಿ ಕೋರಿ ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಲಾಯಿತು. ಹಾಗೂ ಒಬ್ಬ ಮಹಿಳಾ ವೈದ್ಯಾಧಿಕಾರಿ ಅಗತ್ಯವಿರುವುದರಿಂದ ನೇಮಕ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.

**ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ – ಯಾವುದು ಇರುವುದಿಲ್ಲ.**

2026–ಸಿಂ–4.24: **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

1) **ಅತಿಥಿ ಉಪನ್ಯಾಸಕರಿಗೆ ಸಂದರ್ಶನ ನಡೆಸುವ ಕುರಿತು.**

ಪ್ರಭಾಕರ್ ಮಂಟೂರೆಯವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಅತಿಥಿ ಉಪನ್ಯಾಸಕರು ಈ ಹಿಂದಿನ ಹಲವಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದರೂ ಪ್ರತಿ ವರ್ಷ ಪುನ: ಸಂದರ್ಶನ ನಡೆಸಿ ಹೊಸದಾಗಿ ನೇಮಕ ಮಾಡಲಾಗುತ್ತದೆ. ಸರ್ಕಾರಿ ಕಾಲೇಜುಗಳಲ್ಲಿ ಈ ರೀತಿ ಮಾಡುವುದಿಲ್ಲ ಎಂದು ಹೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ ಅತಿಥಿ ಉಪನ್ಯಾಸಕರು ಪ್ರತಿ ವರ್ಷ ತಮ್ಮ ಕೌಶಲ್ಯಗಳನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಬೋಧಕ ವೃತ್ತಿಯಲ್ಲಿ ಇದು ಅನಿವಾರ್ಯ ಕೂಡ. ಮೌಲ್ಯಯುತ ಹಾಗೂ ಹೆಚ್ಚಿನ ವಿಷಯ ಜ್ಞಾನವುಳ್ಳ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಉದ್ದೇಶದಿಂದ ಸಂದರ್ಶನ ನಡೆಸಲಾಗುತ್ತದೆ ಎಂದರು.

ಸದಸ್ಯರಾದ ಶ್ರೀಪಾಲ್‌ರವರು ಮಾತನಾಡಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಬಗ್ಗೆ ವಿದ್ಯಾರ್ಥಿಗಳಿಂದ ಫೀಡ್ ಬ್ಯಾಕ್ ಪಡೆಯಬಹುದು ಎಂದರು.

2) **NEP ಸ್ಕೀಂ ನಲ್ಲಿ ಪ್ರವೇಶ ಪಡೆದು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವ ಕುರಿತು.**

ಸದಸ್ಯರಾದ ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ NEP ಸ್ಕೀಂನಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಸಮ ಸೆಮಿಸ್ಟರ್ ಪರೀಕ್ಷೆಗಳನ್ನು ಸಮ ಸೆಮಿಸ್ಟರ್‌ನಲ್ಲಿಯೇ ತೆಗೆದುಕೊಳ್ಳಬೇಕಾಗಿರುತ್ತದೆ. ಬೆಸ ಸೆಮಿಸ್ಟರ್ ಪರೀಕ್ಷೆಗಳನ್ನು ಬೆಸ ಸೆಮಿಸ್ಟರ್‌ನಲ್ಲಿಯೇ ತೆಗೆದುಕೊಳ್ಳಬೇಕಾಗಿದೆ. ಇದರಿಂದ ವಿದ್ಯಾರ್ಥಿಗಳು ಪರೀಕ್ಷೆಗಾಗಿ ಒಂದು ವರ್ಷ ಕಾಯಬೇಕಾಗಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳ ಅನುಕೂಲಕ್ಕೋಸ್ಕರ ಸಮ ಸೆಮಿಸ್ಟರ್ ಪರೀಕ್ಷೆಗಳನ್ನು ಬೆಸ ಸೆಮಿಸ್ಟರ್‌ನಲ್ಲಿ, ಬೆಸ ಸೆಮಿಸ್ಟರ್ ಪರೀಕ್ಷೆಗಳನ್ನು ಸಮ ಸೆಮಿಸ್ಟರ್‌ನಲ್ಲಿ ತೆಗೆದುಕೊಳ್ಳಲು ಅವಕಾಶ ನೀಡಬೇಕೆಂದು ಕೋರಿದರು. ಕುಲಸಚಿವ(ಮೌಲ್ಯಮಾಪನ)ರವರು ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

3) ಸದಸ್ಯರಾದ ಶ್ರೀ ಶ್ರೀಪಾಲ್‌ರವರು ಮಾತನಾಡಿ ರಾಜ್ಯ ದಲಿತ ಸಂಘರ್ಷ ಸಮಿತಿ ಸಂಚಾಲಕರಾದ ಶ್ರೀ ಡಿ.ಎಸ್. ಗುರುಮೂರ್ತಿ ಇವರು ಸಹ್ಯಾದ್ರಿ ಕಲಾ ಕಾಲೇಜಿನ ಇಂಗ್ಲೀಷ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಶಿವಾನಂದಸ್ವಾಮಿಯವರು ವಿದ್ಯಾರ್ಥಿಗಳಿಗೆ ಅನಗತ್ಯವಾಗಿ ತೊಂದರೆ ಕೊಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಪರಿಶೀಲಿಸುವಂತೆ ಕೋರಿದರು.

ಮಾನ್ಯ ಕುಲಪತಿಗಳು ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ



Scanned with OKEN Scanner

4) ಸದಸ್ಯರಾದ ಶ್ರೀ ಶ್ರೀಪಾಲ್‌ರವರು ಮಾತನಾಡಿ ಹಂದಿಗೋಡು ಕಾಯಿಲೆಯ ಬಗ್ಗೆ ವೈದ್ಯರೊಬ್ಬರು ಸಿದ್ಧಪಡಿಸಿರುವ ಮಾಹಿತಿಗಳನ್ನು ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸಿದ್ಧವಿರುವುದಾಗಿ ತಿಳಿಸಿದರು. ಚರ್ಚೆಯ ನಂತರ ಈ ಬಗ್ಗೆ ವಿಶ್ವವಿದ್ಯಾಲಯದಲ್ಲಿ ಒಂದು ಕಾರ್ಯಕ್ರಮ ಮಾಡಿ ಸದರಿ ಕಾರ್ಯಕ್ರಮದಲ್ಲಿ ಹಂದಿಗೋಡು ಕಾಯಿಲೆಯ ಬಗ್ಗೆ ವೈದ್ಯರು ನಡೆಸಿರುವ ಸಂಶೋಧನೆಯ ದಾಖಲೆಗಳನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲು ತಿಳಿಸಲು ಹಾಗೂ ಸದರಿ ದಾಖಲೆಗಳನ್ನು ವಿಶ್ವವಿದ್ಯಾಲಯದಲ್ಲಿ Documentary depositer ಆಗಿ ಕಾಪಾಡಲು ಕಮಕೈಗೊಳ್ಳಲು ನಿರ್ಣಯಿಸಲಾಯಿತು.

5) ಸದಸ್ಯರಾದ ಶ್ರೀಮತಿ ಸಾಕಮ್ಮರವರು ಮಾತನಾಡಿ, ಉಪಕುಲಸಚಿವರಾದ ಶ್ರೀಮತಿ ಸುಮನ್ ಎ. ಆಚಾರ್, ಇವರ ಸೇವಾ ವಿಷಯಕ್ಕೆ ಸಂಬಂಧಿಸಿದ ಕೋರಿಕೆಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಕೋರಿದರು. ಕುಲಸಚಿವರು ಈ ಕುರಿತು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದರು

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

14/8/20

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ

ಸಹಿ/-
ಕುಲಪತಿಗಳು